# ಸಮಾಜ ವಿಜ್ಞಾನ
# SOCIAL SCIENCE

## ಭಾಗ - II
## PART- II

## ತರಗತಿ -5
## STANDARD - 5

ಕೇರಳ ಸರಕಾರ
ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ(SCERT), ಕೇರಳ

2015

JT 587-1/ Soc. Sci. (K)-5 (Vol-2)

## ರಾಷ್ಟ್ರಗೀತೆ

ಜನ ಗಣ ಮನ ಅಧಿನಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ,
ವಿಂಧ್ಯ ಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಶ ಮಾಗೇ,
ಗಾಹೇ ತವ ಜಯ ಗಾಥಾ
ಜನ ಗಣ ಮಂಗಲದಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ,
ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ ಜಯ ಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ಹೆತ್ತವರನ್ನು ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**State Council of Educational Research and Training (SCERT)**
Poojappura, Thiruvananthapuram 695 012, Kerala

*Website* : www.scertkerala.gov.in
*E mail* : scertkerala@gmail.com
Phone : 0471 - 2341883, Fax : 0471 - 2341869
Typesetting and Layout : SCERT
First Edition : 2014, Reprint : 2015
Printed at : KBPS, Kakkanad, Kochi-30
© Department of Education, Government of Kerala

ಪ್ರೀತಿಯ ಮಕ್ಕಳೇ,

ಸಮಾಜ ವಿಜ್ಞಾನ ಕಲಿಕೆಯ ಕಲಿಕಾ ಮಂಡಲಗಳೆಂದರೆ ವ್ಯಕ್ತಿಗೆ ಸಮಾಜದೊಂದಿಗೆ ಹಾಗೂ ಪ್ರಕೃತಿಯೊಂದಿಗಿರುವ ಸಂಬಂಧದ ಕುರಿತಾಗಿದೆ. ಮಾನವನ ಸಾಮಾಜಿಕಪ್ರಜ್ಞೆ ಹಾಗೂ ಪರಿಶ್ರಮವು ನಮ್ಮ ಸಂಸ್ಕೃತಿ ಮತ್ತು ನಾಗರಿಕತೆಯ ಉದಯಕ್ಕೆ ಕಾರಣವಾಯಿತು. ಸಾಮಾಜಿಕ ಜೀವನದ ಆರೋಗ್ಯಕರವಾದ ಅಸ್ತಿತ್ವಕ್ಕೂ ಭದ್ರತೆಗೂ ಒಗ್ಗಟ್ಟಿನ ಕಾರ್ಯಚಟುವಟಿಕೆಗಳು ಅತ್ಯಗತ್ಯ. ಬದಲಾಗುತ್ತಿರುವ ಕಾಲಘಟ್ಟದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಹಾಗೂ ಜಾಗ್ರತೆಯಿಂದ ಮುನ್ನಡೆಯಲು ಸಮಾಜವಿಜ್ಞಾನ ಕಲಿಕೆಯು ಸಹಾಯ ಮಾಡುತ್ತದೆ. ಒಬ್ಬ ಉತ್ತಮ ಪ್ರಜೆಯಾಗಿ ಬೆಳೆಯಲು, ಸಮಾಜದ ಒಳಿತಿಗಾಗಿ ದುಡಿಯಲು ಬೇಕಾದ ತಿಳುವಳಿಕೆ, ಮನೋಭಾವ ಹಾಗೂ ನೈಪುಣ್ಯಗಳನ್ನು ವಿಕಾಸಗೊಳಿಸಲು ಸಮಾಜವಿಜ್ಞಾನದ ಕಲಿಕೆಯಿಂದ ಸಾಧ್ಯ.

ಈ ವಲಯದಲ್ಲಿ ಹೆಚ್ಚಿನ ಅನ್ವೇಷಣೆ ನಡೆಸಲೂ ಅವುಗಳನ್ನು ಸಮಾಜದ ಪ್ರಗತಿಗೆ ಕ್ರಿಯಾಶೀಲವಾಗಿ ಬಳಸಿಕೊಳ್ಳಲೂ ಸಾಧ್ಯವಾಗಬಹುದೆಂದು ಹಾರೈಸುತ್ತೇವೆ.

ಶುಭ ಹಾರೈಕೆಗಳೊಂದಿಗೆ,

**ಡಾ. ಎಸ್. ರವೀಂದ್ರನ್ ನಾಯರ್**

ನಿರ್ದೇಶಕರು

ಎಸ್. ಸಿ. ಇ. ಆರ್.ಟಿ.

# TEXT BOOK DEVELOPMENT COMMITTEE

## PARTICIPANTS

**Abdul Hameed V.**
H.S.A. , M.U.M.V.H.S., Vadakara, Calicut

**Abdul Samad K.C.**
H.S.S.T. Govt. H.S.S. Vadakara, P.O. Puthur, Calicut

**Isha V. K.**
U.P.S.A., A.M.L.P.S., Vettikkad, Perinthalmanna, Malappuram.

**Gopakumar G.P.** Lecturer, DIET, Kollam.

**Hari Pradeep S.** H.S.A., S.V.H.S., Pullad, Thiruvalla.

**Hari V.** U.P.S.A., Unity A.U.P.S., Thenkara.

**Jayakrishnan O.K.** K.P.C.H.S.S., Pattannur, P.O. Pattannur, Kannur.

**Nishanth Mohan M.,** H.S.S.T. Govt. Girls H.S.S., Karamana, Thiruvananthapuram.

**Nisha M.S.,** U.P.S.A., P.H.S.S., Mezhuveli, Pathanamthitta- 689507

**Rajan K.** G.U.P.S., Thiruvazhiyad, Palakkad.

**N. Sukumaran,** Govt. V & H.S.S. For Girls, Manakkad, Thiruvananthapuram.

**Verghese Pothan,** H.S.S.T. St. John's H.S.S., Mattam, Mavelikkara.

**Yousuf Kumar S.M.** H.S.S.T. G.M.B.H.S.S., Attingal.

## EXPERTS

**Dr. Abdul Razak P. P.** Associate Professor, Dept. of History, P.S.M.O. College, Thiroorangadi.

**Dr. N.P. Hafis Muhammed,** Associate Professor(Rtd.) Dept. of Sociology, Feroke College, Calicut.

**Mahalingam S.,** Associate Professor(Rtd.) Dept. of Geography Govt. College, Chittur.

**P.S. Manoj Kumar,** Asst. Professor, Dept. of History, K.K.T.M. College, Kodungallur, Thrissur.

**Dr. K.S. Madhavan,** Asst. Professor, Dept. of History, Calicut University

**Dr. T. Neelakantan,** Associate Professor(Rtd.) Dept. of Geography, University College,Thiruvananthapuram.

**Dr. Priyesh M.** Asst. Professor, Dept. of Economics, University College, Thiruvananthapuram.

**Dr. Venumohan,** Asst. Professor, Dept. of History, Govt. College, Nedumangad.

**I.P. Joseph,** Asst. Professor, (Rtd) SCERT Kerala

## TRANSLATION COMMITTEE

## PARTICIPANTS

**Shankaranarayana Bhat N.**
U.P.S.A., A. U. P. S., Dharmathadka.

**Raghava M.N.**
HSA (SS) GHSS, Pandi

**Praveena V.,** U.P.S.A., Shri. Sathyanarayana High school, Perla.

**Suresh P.**
HSA (SS) GHSS, Bekur

### LANGUAGE EXPERT

**Dr. Radhakrishna Bellur,** Asst. Professor(Kannada ), Govt. College Kasaragod.

### SUBJECT EXPERT

**K.V. Sathyanarayana Rao,** HM GHS, Soorambail

## ACADEMIC CO-ORDINATOR

**Chithra Madhavan,** Research Officer, S.C.E.R.T.

## ವಿಷಯಾನುಕ್ರಮಣಿಕೆ




7. ಕಬ್ಬಿಣ ಉಂಟುಮಾಡಿದ ಬದಲಾವಣೆಗಳು 87



8. ಅಹಿಂಸೆ, ಅರಿವು, ಅಧಿಕಾರ 97



9. ಜನರು ಜನರಿಗಾಗಿ 108



10 ಕೇರಳ ತೀರದಲ್ಲಿ 119




11.ನಮ್ಮ ಭಾರತ 134

## ಸೌಲಭ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಈ ಪುಸ್ತಕದಲ್ಲಿ ಬಳಸಲಾಗಿದೆ.


ಹೆಚ್ಚಿನ ಓದಿಗಾಗಿ - ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿಲ್ಲ


ಕಲಿಕೆಯ ಪ್ರಗತಿಯನ್ನು ನಿರ್ಣಯಿಸುವುದಕ್ಕಿರುವ ಪ್ರಶ್ನೆಗಳು


ಕ್ರೋಢೀಕರಣ


ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು


ಮೌಲ್ಯನಿರ್ಣಯ ಮಾಡುವ


ಮುಂದುವರಿದ ಚಟುವಟಿಕೆಗಳು









# 7

# ಕಬ್ಬಿಣ ಉಂಟುಮಾಡಿದ ಬದಲಾವಣೆಗಳು





**ಚಿತ್ರ 7.1**

ಕೊಟ್ಟಿರುವ ಪ್ರಾಚೀನ ಭಾರತದ ಭೂಪಟದಲ್ಲಿ ಗುರುತಿಸಲಾದ ನದಿಗಳು ಯಾವುವು? ಕಂಡುಹಿಡಿಯಿರಿ.

- ಸಿಂಧೂ
- 
- 
- 
- 
- 
- 

ಇವುಗಳಲ್ಲಿ ಭಾರತದ ವಾಯುವ್ಯ ಭಾಗದಲ್ಲಿ ಇರುವವುಗಳು ಯಾವುವು? ಅವುಗಳು ಸಿಂಧೂ ನದಿ ಹಾಗೂ ಅದರ ಉಪನದಿಗಳಾಗಿವೆ. ನಾವು ಈ ಮೊದಲು ಚರ್ಚಿಸಿದ ಹರಪ್ಪ ಸಂಸ್ಕೃತಿಯು ಈ ನದೀತೀರಗಳಲ್ಲಿ ಬೆಳೆದು ಬಂದಿತ್ತು. ಸುಮಾರು 3500 ವರ್ಷಗಳ ಹಿಂದೆ 'ಆರ್ಯರು' ಎಂದು ಕರೆಯಲ್ಪಡುವ ಜನಾಂಗದವರು ಈ ಭಾಗಕ್ಕೆ ವಲಸೆ ಬಂದರು. ಇದರ ಕುರಿತು ವೇದಗಳಿಂದ ಮಾಹಿತಿಗಳು ಲಭಿಸುತ್ತವೆ. ವೇದಗಳು ಸಂಸ್ಕೃತ ಭಾಷೆಯಲ್ಲಿದ್ದುವು. ಆರಂಭ ಕಾಲದಲ್ಲಿ ವೇದಗಳು ಬಾಯ್ದೆರೆಯಾಗಿ ಪ್ರಚಲಿತವಾಗಿದ್ದುವು. ವೇದಗಳಲ್ಲಿ ಉಲ್ಲೇಖಿಸಲಾದ ಜನ ಜೀವನವು ಅಸ್ತಿತ್ವದಲ್ಲಿದ್ದ ಕಾಲವನ್ನು ವೇದಕಾಲ ಎಂದು ಕರೆಯುತ್ತಾರೆ. ವೇದಗಳ ಕುರಿತು ಮಾಹಿತಿಗಳಿರುವ ಚಾರ್ಟನ್ನು ಗಮನಿಸಿರಿ.




ಇವುಗಳಿಂದ ಯಾವೆಲ್ಲ ಮಾಹಿತಿಗಳು ಲಭಿಸುತ್ತವೆ?

- ವೇದಕಾಲವು ಕ್ರಿ. ಪೂ. 1500 ರಿಂದ ಕ್ರಿ.ಪೂ. 600ರ ವರೆಗಿನ ಕಾಲಘಟ್ಟವಾಗಿದೆ.
- ಋಗ್ವೇದವು ಮೊತ್ತಮೊದಲು ರಚಿಸಿದ ವೇದವಾಗಿದೆ.
- ಋಗ್ವೇದದಲ್ಲಿ ಉಲ್ಲೇಖಿಸಲಾದ ಜನಜೀವನವು ಅಸ್ತಿತ್ವದಲ್ಲಿದ್ದ ಕಾಲವನ್ನು ಋಗ್ವೇದಕಾಲ ಎಂದು ಕರೆಯುತ್ತಾರೆ.
- 
- 
- 

## ಜಾನುವಾರುಗಳು ಸಂಪತ್ತಾದಾಗ

ಋಗ್ವೇದಕಾಲದ ಆರ್ಯರ ಜೀವನದ ಕುರಿತಾಗಿ ಇತಿಹಾಸಕಾರನಾದ ಎ.ಎಲ್. ಭಾಷಾಂ ಹೇಳುವುದನ್ನು ಗಮನಿಸಿರಿ.

"ಕೃಷಿಕರು ಜಾನುವಾರುಗಳನ್ನು ಪಡೆಯುವುದಕ್ಕಾಗಿ ಪ್ರಾರ್ಥಿಸುತ್ತಿದ್ದರು. ಸೈನಿಕರು ಜಾನುವಾರುಗಳನ್ನು ಹಿಡಿದಿಟ್ಟುಕೊಳ್ಳುವುದಕ್ಕಾಗಿ ಯುದ್ಧ ಮಾಡುತ್ತಿದ್ದರು. ಪುರೋಹಿತರು ಜಾನುವಾರುಗಳನ್ನು ಪ್ರತಿಫಲ ರೂಪದಲ್ಲಿ ಪಡೆಯುವುದಕ್ಕಾಗಿ ಯಾಗಗಳನ್ನು ನಡೆಸುತ್ತಿದ್ದರು".

ಈ ಕಾಲಘಟ್ಟದಲ್ಲಿ ಜಾನುವಾರುಗಳಿಗೆ ಇಷ್ಟೊಂದು ಪ್ರಾಧಾನ್ಯ ಲಭಿಸಲು ಕಾರಣಗಳು ಯಾವುವು?

ಜಾನುವಾರುಗಳು ಋಗ್ವೇದಕಾಲದ ಪ್ರಧಾನ ಸಂಪತ್ತಾಗಿದ್ದುವು. ಜಾನುವಾರು ಸಾಕಣೆಯು ಜನರ ಪ್ರಧಾನ ಕಸುಬಾಗಿತ್ತು. ಅದರೊಂದಿಗೆ ಕೃಷಿಯನ್ನೂ ಮಾಡುತ್ತಿದ್ದರು. ಬಾರ್ಲಿಯು ಪ್ರಧಾನ ಬೆಳೆಯಾಗಿತ್ತು. ಇವರು ಬುಡಕಟ್ಟುಗಳಾಗಿ ಜೀವಿಸುತ್ತಿದ್ದರು. ಇಂತಹ ಪ್ರತಿಯೊಂದು ಬುಡಕಟ್ಟಿನ ಮುಖ್ಯಸ್ಥನನ್ನು ರಾಜ ಎಂದು ಕರೆಯುತ್ತಿದ್ದರು. ಜಾನುವಾರುಗಳಿಗಾಗಿ ಬುಡಕಟ್ಟುಗಳೊಳಗೆ ಪರಸ್ಪರ ಜಗಳ ನಡೆಯುತ್ತಿತ್ತು. ಬುಡಕಟ್ಟುಗಳೊಳಗೆ ಹಾಗೂ ಬುಡಕಟ್ಟುಗಳು ಮತ್ತು ಆರ್ಯರಲ್ಲದ ಇತರರೊಳಗೆ ಯುದ್ಧಗಳು ನಡೆಯುತ್ತಿದ್ದವು. ಆರ್ಯರಲ್ಲಿ ಕುದುರೆಗಳು, ತಾಮ್ರ ಹಾಗೂ ಕಂಚಿನಿಂದ ತಯಾರಿಸಿದ ಆಯುಧಗಳು ಇದ್ದುವು. ಇವುಗಳ ಸಹಾಯದಿಂದ ಆರ್ಯರಲ್ಲದವರನ್ನು ಅವರು ಸೋಲಿಸಿದರು. ಸೋತವರು ದಾಸರು ಹಾಗೂ ಗುಲಾಮರಾಗುತ್ತಿದ್ದರು. ಅವರ ಜಾನುವಾರುಗಳನ್ನು ಆರ್ಯರು ಸ್ವಾಧೀನಪಡಿಸಿಕೊಂಡರು.



ಕೆಳಗೆ ಕೊಟ್ಟಿರುವ ಸೂಚಕಗಳ ಆಧಾರದಲ್ಲಿ ಋಗ್ವೇದಕಾಲದ ಹಾಗೂ ಹರಪ್ಪ ನಾಗರಿಕತೆಯ ಕಾಲದ ಜೀವನಕ್ರಮವನ್ನು ಹೋಲಿಸಿರಿ.

- ಕಸುಬು
- ಉಪಕರಣಗಳು

ಋಗ್ವೇದಕಾಲದಲ್ಲಿ ಜನರು ಇಂದ್ರ, ವರುಣ, ಅಗ್ನಿ ಮುಂತಾದ ದೇವರುಗಳನ್ನೂ ಅತಿಥಿ, ಉಷಸ್ಸು ಎಂಬೀ ದೇವತೆಗಳನ್ನೂ ಆರಾಧಿಸುತ್ತಿದ್ದರು. ಈ ಕಾಲಘಟ್ಟದಲ್ಲಿ ಉಪಯೋಗಿಸಿದ ಮಣ್ಣಿನ ಪಾತ್ರೆಗಳಿಗೆ ಬೂದುಬಣ್ಣವಿತ್ತು. ಚಿತ್ರದಲ್ಲಿ ಕೊಟ್ಟಿರುವುದು ಅಂದಿನ ಕಾಲದಲ್ಲಿ ಉಪಯೋಗಿಸುತ್ತಿದ್ದ ಮಣ್ಣಿನ ಪಾತ್ರೆಗಳಲ್ಲಿ ಒಂದರ ಅವಶೇಷವಾಗಿದೆ.



ಬೂದು ಬಣ್ಣದಲ್ಲಿರುವ ಮಣ್ಣಿನ ಪಾತ್ರೆ

## ಗಂಗಾ ಬಯಲಿನ ಕಡೆಗೆ

ಸಾಮವೇದ, ಯಜುರ್ವೇದ, ಅಥರ್ವವೇದ ಎಂಬಿವುಗಳಲ್ಲಿ ಉಲ್ಲೇಖಿಸಿದ ಜನಜೀವನದ ಕಾಲವನ್ನು ಅನಂತರದ ವೇದಕಾಲ ಎಂದು ಕರೆಯುತ್ತಾರೆ. ಋಗ್ವೇದ ಕಾಲಘಟ್ಟದಲ್ಲಿ ಜಾನುವಾರುಗಳನ್ನು ಮೇಯಿಸುತ್ತಿದ್ದ ಆರ್ಯರು ಅನಂತರದ ವೇದಕಾಲದಲ್ಲಿ ಗಂಗಾನದೀ ಬಯಲಿಗೆ ತಲುಪಿದರು. ಗಂಗಾಬಯಲು ಗಂಗಾ ನದಿಯ ಇಕ್ಕಡೆಗಳಲ್ಲಿರುವ ಪ್ರದೇಶವಾಗಿದೆ. ಬುಡಕಟ್ಟುಗಳೊಳಗಿನ ಜಗಳ, ಹೊಸ ಹೊಸ ಬುಡಕಟ್ಟುಗಳ ಹುಟ್ಟು ಹಾಗೂ ಜನಸಂಖ್ಯೆಯ ಹೆಚ್ಚಳವು ಗಂಗಾನದೀ ಬಯಲಿಗೆ ಆರ್ಯರು ಬಂದು ತಲುಪಲು ಕಾರಣವಾದುವು.

ಭೂಪಟ(ಚಿತ್ರ 7.1) ನಿರೀಕ್ಷಿಸಿ ಗಂಗಾಬಯಲು ಪ್ರದೇಶವು ಭಾರತದ ಯಾವ ಭಾಗದಲ್ಲಿದೆ ಎಂದು ಕಂಡುಕೊಳ್ಳಿರಿ. ಇಂದು ಅದು ಯಾವೆಲ್ಲ ರಾಜ್ಯಗಳಲ್ಲಿ ವ್ಯಾಪಿಸಿಕೊಂಡಿದೆ?

ಗಂಗಾಬಯಲಿನ ವಿಶೇಷತೆಗಳೇನು ಎಂದು ನೋಡೋಣ.

- ಬೃಹತ್ ಮರಗಳಿಂದ ಕೂಡಿದ ಕಾಡುಗಳು
- ಫಲವತ್ತಾದ ಮೆಕ್ಕಲು ಮಣ್ಣು
- ಪ್ರಬಲವಾದ ಮಳೆ

ಗಂಗಾಬಯಲಿನ ಕಡೆಗೆ ಬರುವಾಗ ಆರ್ಯರ ಕೈಯಲ್ಲಿದ್ದ ಆಯುಧಗಳು ಯಾವ ಲೋಹದಿಂದ ನಿರ್ಮಿಸಿದವುಗಳಾಗಿದ್ದುವು?

ತಾಮ್ರ ಹಾಗೂ ಕಂಚಿನಿಂದ ತಯಾರಿಸಿದ ಆಯುಧಗಳನ್ನು ಉಪಯೋಗಿಸಿ ಗಂಗಾಬಯಲು ಪ್ರದೇಶದಲ್ಲಿ ಅಗೆಯಲೂ ಮರಗಳನ್ನು ಕಡಿಯಲೂ ಕಷ್ಟವಾಗುತ್ತಿತ್ತು. ಅದಕ್ಕಾಗಿ ಅವರು ಕಾಡಿಗೆ ಬೆಂಕಿ ಹಚ್ಚಿ ಮುನ್ನಡೆದರು. ಆದರೆ ಮರಗಳ ಅಳಿದುಳಿದ ಭಾಗಗಳು ಅವರಿಗೆ ಪುನಃ ತೊಂದರೆಯನ್ನು ಉಂಟುಮಾಡಿದುವು. ಮಣ್ಣನ್ನು ಅಗೆಯಲು ಮತ್ತು ಮರಗಳನ್ನು ಕಡಿಯಲು ಕಠಿಣವಾದ ಲೋಹದಿಂದ ತಯಾರಿಸಿದ ಕೆಲಸದ ಉಪಕರಣಗಳು ಅಗತ್ಯವಾಗಿದ್ದುವು. ಇದು ಕಬ್ಬಿಣದ ಸಂಶೋಧನೆಗೆ ಕಾರಣವಾಯಿತು.



ಇಂದು ನಾವು ಕೃಷಿಗೆ ಹಾಗೂ ಮರಗಳನ್ನು ಕಡಿಯಲು ಉಪಯೋಗಿಸುವ ಉಪಕರಣಗಳನ್ನು ಮತ್ತು ಆಯುಧಗಳನ್ನು ಯಾವ ಲೋಹದಿಂದ ತಯಾರಿಸಲಾಗಿದೆ? ತಾಮ್ರ, ಕಂಚು ಎಂಬಿವುಗಳಿಗಿಂತ ಕಬ್ಬಿಣವು ಹೇಗೆ ಭಿನ್ನವಾಗಿದೆ?


ಗಂಗಾಬಯಲು ಪ್ರದೇಶದಲ್ಲಿ ಹೇರಳವಾಗಿ ಕಬ್ಬಿಣದ ನಿಕ್ಷೇಪವಿತ್ತು. ಕಬ್ಬಿಣವನ್ನು ಸಂಶೋಧಿಸಿದ ಬಳಿಕ ಅವರು ಗಟ್ಟಿಯಾದ ಉಪಕರಣಗಳನ್ನೂ ಆಯುಧಗಳನ್ನೂ ತಯಾರಿಸಿದರು. ಕಾಡುಗಳನ್ನೆಲ್ಲ ಕಡಿದು ಸ್ವಚ್ಛಗೊಳಿಸಿದರು. ನೇಗಿಲುಗಳನ್ನು ಉಪಯೋಗಿಸಿ ನೆಲವನ್ನು ಉಳುವುದಕ್ಕೆ ಆರಂಭಿಸಿದರು. ಕೃಷಿಯು ಪ್ರಧಾನ ಕಸುಬಾಗಿ ಬದಲಾಯಿತು. ಕಬ್ಬಿಣವನ್ನು ಉಪಯೋಗಿಸಿದ ಈ ಕಾಲಘಟ್ಟವನ್ನು ಕಬ್ಬಿಣಯುಗ ಎಂದು ಕರೆಯುತ್ತಾರೆ.

ಗಂಗಾಬಯಲಿನ ಪರಿಸರವು ಕೃಷಿಗೆ ಎಷ್ಟರ ಮಟ್ಟಿಗೆ ಅನುಕೂಲಕರವಾಗಿತ್ತು? ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

ಜಾನುವಾರು ಸಾಕಣೆಯಿಂದ ಕೃಷಿಯ ಕಡೆಗಿನ ಬದಲಾವಣೆಯಿಂದಾದ ಪ್ರಯೋಜನಗಳು ಯಾವುವು ಎಂದು ನೋಡೋಣ.

- ಸ್ಥಿರವಾಸ ಆರಂಭವಾಯಿತು.
- ಕೃಷಿ ಬೆಳೆಗಳ ಉತ್ಪಾದನೆ ಹೆಚ್ಚಿತು.
- ಹೆಚ್ಚಾದ ಉತ್ಪನ್ನಗಳನ್ನು ಕೈಬದಲಾಯಿಸಿಕೊಂಡರು.

ಗಂಗಾಬಯಲಿನ ಮಾನವನ ಜೀವನದಲ್ಲಿ ಕಬ್ಬಿಣದ ಸಂಶೋಧನೆ ಹಾಗೂ ಉಪಯೋಗವು ಉಂಟುಮಾಡಿದ ಬದಲಾವಣೆಗಳ ಕುರಿತು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.


ಬೂದುಬಣ್ಣದ ಪಾತ್ರೆಗಳ ತುಣುಕುಗಳು

ಅನಂತರದ ವೇದಕಾಲದಲ್ಲಿ ಜನರು ಉಪಯೋಗಿಸಿದ ಮಣ್ಣಿನ ಪಾತ್ರೆಗಳನ್ನು 'ಬಣ್ಣ ಹಚ್ಚಿದ ಬೂದುಬಣ್ಣದ ಪಾತ್ರೆಗಳು' (Painted Grey Ware) ಎಂದು ಕರೆಯುತ್ತಾರೆ. ಅವುಗಳಲ್ಲಿ ಕೆಲವು ಪಾತ್ರೆಗಳ ಅವಶೇಷಗಳನ್ನು ಚಿತ್ರದಲ್ಲಿ ಕಾಣಬಹುದು. ಜನರು ಸ್ಥಿರವಾಸ ಆರಂಭಿಸಿದಾಗ ಅವರ ಜೀವನ ಕ್ರಮದಲ್ಲಿ ಬದಲಾವಣೆಗಳು ಉಂಟಾದುವು. ಉದ್ಯೋಗದ ಆಧಾರದಲ್ಲಿ ಜನರನ್ನು ನಾಲ್ಕು ವಿಭಾಗಗಳಾಗಿ ವಿಭಜಿಸಲಾಯಿತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬೀ ವಿಭಜನೆಯನ್ನು ಚಾತುರ್ವರ್ಣ್ಯ ಎಂದು ಕರೆಯುತ್ತಾರೆ.

ಋಗ್ವೇದಕಾಲದಲ್ಲಿ ಯಾವೆಲ್ಲ ದೇವರು ಹಾಗೂ ದೇವತೆಗಳನ್ನು ಜನರು ಆರಾಧಿಸುತ್ತಿದ್ದರು? ಅನಂತರದ ವೇದಕಾಲದಲ್ಲಿ ಈ ದೇವ ದೇವತೆಗಳ ಪ್ರಾಧಾನ್ಯ ಕಡಿಮೆಯಾಗಿ ಯಜ್ಞ ಯಾಗಾದಿಗಳಿಗೆ ಪ್ರಾಧಾನ್ಯ ಇರುವ ಆರಾಧನ ರೀತಿ ವ್ಯಾಪಕವಾಯಿತು. ಈ ಯಾಗಗಳು ಜಾನುವಾರುಗಳನ್ನು ಬಲಿಕೊಡುವಂತಹ ಯಾಗಗಳಾಗಿದ್ದುವು.

ಕೆಳಗಿನ ಪಟ್ಟಿಯಲ್ಲಿ ಋಗ್ವೇದಕಾಲ ಮತ್ತು ಅನಂತರದ ವೇದಕಾಲದ ಕೆಲವು ವಿಶೇಷತೆಗಳನ್ನು ಕೊಡಲಾಗಿದೆ. ಪ್ರತಿಯೊಂದರ ಎದುರು ಅವುಗಳು ಯಾವ ಕಾಲಘಟ್ಟಕ್ಕೆ ಸಂಬಂಧಿಸಿವೆ ಎಂದು ಬರೆಯಿರಿ.

| ವಿಶೇಷತೆ | ಋಗ್ವೇದಕಾಲ/ ಅನಂತರದ ವೇದಕಾಲ |
|---|---|
| ಕೃಷಿಯನ್ನು ಪ್ರಧಾನ ಕಸುಬಾಗಿ ಸ್ವೀಕರಿಸಿದರು | |
| ಯಾಗಗಳು ವ್ಯಾಪಕವಾಯಿತು | |
| ಕಬ್ಬಿಣದ ಉಪಕರಣಗಳನ್ನು ಉಪಯೋಗಿಸಿದರು | |
| ಜಾನುವಾರು ಸಾಕಣೆಯು ಪ್ರಧಾನ ಕಸುಬು ಆಗಿತ್ತು | |
| ಸ್ಥಿರವಾಸ ಆರಂಭಿಸಿದರು | |
| ಇಂದ್ರ, ವರುಣ ಮುಂತಾದ ದೇವರುಗಳನ್ನು ಆರಾಧಿಸಿದರು | |
| ಬಣ್ಣ ಹಚ್ಚಿದ ಬೂದುಬಣ್ಣದ ಪಾತ್ರೆಗಳನ್ನು ಉಪಯೋಗಿಸಿದರು | |

## ಶಿಲೆಗಳೂ ಕಥೆ ಹೇಳುತ್ತವೆ

ಕಬ್ಬಿಣಯುಗದ ಕಾಲಘಟ್ಟದಲ್ಲಿ ಕೇರಳವನ್ನೊಳಗೊಂಡಿದ್ದ 'ತಮಿಳಗಂ'ನಲ್ಲಿ ಜನಜೀವನ ಹೇಗಿತ್ತು ಎಂಬುದನ್ನು ಚರ್ಚಿಸೋಣ. ಪ್ರಾಚೀನ ಕಾಲದ ದಕ್ಷಿಣ ಭಾರತದ ಪ್ರದೇಶಗಳನ್ನು 'ತಮಿಳಗಂ' ಎಂದು ಕರೆಯುತ್ತಾರೆ.

ಕೆಳಗೆ ಕೊಟ್ಟಿರುವ ಚಿತ್ರಗಳನ್ನು ನೋಡಿರಿ.




ನಡುಕಲ್ಲು



ಕೊಡೆಕಲ್ಲು

ಪ್ರಾಚೀನ ತಮಿಳಗಂನಲ್ಲಿ ಮೃತಶರೀರಗಳನ್ನು ಹೂತು ಹಾಕಿ ಅದರ ಮೇಲೆ ಇರಿಸುತ್ತಿದ್ದ ದೊಡ್ಡ ಕಲ್ಲುಗಳನ್ನು ಮೇಲಿನ ಚಿತ್ರಗಳಲ್ಲಿ ಕಾಣಬಹುದು. ಇವುಗಳು ವಿವಿಧ ರೂಪಗಳಲ್ಲಿ ಕಂಡುಬರುತ್ತವೆ. ಇಂತಹ ಕಲ್ಲುಗಳನ್ನು 'ಮಹಾಶಿಲೆಗಳು' ಎಂದು ಕರೆಯುತ್ತಾರೆ. ಮೃತ ಶರೀರಗಳನ್ನು ಸಂಸ್ಕರಿಸಿದ ಹೊಂಡಗಳಿಂದ ಅಂದಿನ ಜನರು ಉಪಯೋಗಿಸುತ್ತಿದ್ದ ಕಬ್ಬಿಣದ ಆಯುಧಗಳು, ವಿವಿಧ ಉಪಕರಣಗಳು, ಮಣ್ಣಿನ ಪಾತ್ರೆಗಳು, ಧಾನ್ಯಗಳ ಅವಶೇಷಗಳು ಮೊದಲಾದ ವಸ್ತುಗಳನ್ನು ಕಂಡುಹಿಡಿಯಲಾಗಿದೆ. ಈ ಮಹಾಶಿಲೆಗಳು ಅಂದಿನ ಕಾಲದ ಕುರಿತಾದ ಮಾಹಿತಿಗಳನ್ನು ಒದಗಿಸುವ ಪುರಾವೆಗಳಾಗಿವೆ. ಈ ಕಾಲಘಟ್ಟವನ್ನು ಮಹಾಶಿಲಾಯುಗ ನಾಗರಿಕತೆಯಕಾಲ ಎಂದು ಕರೆಯುತ್ತಾರೆ. ಕೆಳಗೆ ಕೊಟ್ಟಿರುವ ಚಿತ್ರವನ್ನು ನೋಡಿರಿ. ಇದರಲ್ಲಿರುವವುಗಳು ಮಹಾಶಿಲಾಯುಗ ನಾಗರಿಕತೆಯ ಕಾಲಘಟ್ಟದಲ್ಲಿ ಉಪಯೋಗಿಸುತ್ತಿದ್ದ ಆಯುಧಗಳು ಹಾಗೂ ಉಪಕರಣಗಳಾಗಿವೆ. ಇವುಗಳನ್ನು ಕಬ್ಬಿಣದಿಂದ ತಯಾರಿಸಲಾಗಿದೆ.



ಮಹಾಶಿಲಾಯುಗ ನಾಗರಿಕತೆಯ ಕಾಲಘಟ್ಟದ ಕಬ್ಬಿಣದ ಉಪಕರಣಗಳು




ಆರಂಭ ಕಾಲದ ತಮಿಳಗಂನ ಕಬ್ಬಿಣಯುಗವನ್ನು ಮಹಾಶಿಲಾಯುಗ ನಾಗರಿಕತೆಯ ಕಾಲಘಟ್ಟ ಎಂದು ಕರೆಯಲಾಗುತ್ತದೆ. ಯಾಕೆ? ಇದು ಶಿಲಾಯುಗಕ್ಕಿಂತ ಹೇಗೆ ಭಿನ್ನವಾಗಿದೆ?

ಪ್ರಾಚೀನ ತಮಿಳಗಂನ ಜನಜೀವನದ ಕುರಿತು ಮಹಾಶಿಲಾಸ್ಮಾರಕಗಳಿಂದಲೂ 'ಪಳಂತಮಿಳ್' ಪಾಟ್ಟುಗಳ ಸಂಗ್ರಹಗಳಿಂದಲೂ ಮಾಹಿತಿಗಳು ಲಭಿಸುತ್ತವೆ. ಪಳಂತಮಿಳ್ ಪಾಟ್ಟುಗಳನ್ನು ಸಂಘಂಕೃತಿಗಳು ಎಂದೂ ಕರೆಯುತ್ತಾರೆ. ಇವುಗಳನ್ನು ಸಂಘಂಕೃತಿಗಳು ಎಂದು ಕರೆಯುವುದು ಯಾಕಾಗಿರಬಹುದು? ಮಧುರೈಯನ್ನು ಕೇಂದ್ರವಾಗಿರಿಸಿ ಆಡಳಿತ ನಡೆಸುತ್ತಿದ್ದ ಪಾಂಡ್ಯರ ಪ್ರೋತ್ಸಾಹದಲ್ಲಿ ಸಾಹಿತಿಗಳ ಒಂದು ಒಕ್ಕೂಟವು ಪ್ರಾಚೀನ ತಮಿಳಗಂನಲ್ಲಿ ನೆಲೆನಿಂತಿತ್ತು. ಇದನ್ನು 'ಸಂಘಂ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಪತ್ತುಪಾಟ್ಟು, ಪದಿಟ್ಟ್‌ಪತ್ತ್, ಅಗನಾನೂರು, ಪುರನಾನೂರು ಎಂಬಿವುಗಳು ಸಂಘಂಕೃತಿಗಳಲ್ಲಿ ಪ್ರಧಾನವಾದವುಗಳಾಗಿವೆ.

ಪ್ರಾಚೀನ ತಮಿಳಗಂನ ಆಡಳಿತಾಧಿಕಾರಿಗಳಾಗಿದ್ದ ಪಾಂಡ್ಯ, ಚೇರ ಹಾಗೂ ಚೋಳ ರಾಜ ವಂಶಗಳನ್ನು 'ಮೂವೆಂದರ'ರೆಂದು ಕರೆಯುತ್ತಿದ್ದರು.

ಕೆಳಗೆ ಕೊಟ್ಟಿರುವ ಭೂಪಟದಲ್ಲಿ ಚೇರರು, ಚೋಳರು ಹಾಗೂ ಪಾಂಡ್ಯರು ಆಡಳಿತ ನಡೆಸಿದ ಪ್ರದೇಶಗಳನ್ನು ಗುರುತಿಸಲಾಗಿದೆ. ಕೇರಳ ಒಳಗೊಂಡಿರುವ ಪ್ರದೇಶದಲ್ಲಿ ಆಡಳಿತ ನಡೆಸಿದ ರಾಜವಂಶ ಯಾವುದೆಂದು ಕಂಡುಹಿಡಿಯಬಹುದೇ?




ಸಂಘಕಾಲದ ದಕ್ಷಿಣ ಭಾರತ

## ಪಳಂತಮಿಳ್‌ಪಾಟ್ಟ್‌ನ ಮೂಲಕ

ಸಂಘಂಕೃತಿಗಳು ನೀಡುವ ಮಾಹಿತಿಗಳ ಪ್ರಕಾರ ಪ್ರಾಚೀನ ತಮಿಳಗಂನ್ನು ಐದು ಭೂವಿಭಾಗಗಳಾಗಿ ವಿಂಗಡಿಸಲಾಗಿತ್ತು. ಅವುಗಳನ್ನು 'ತಿಣಗಳು' ಎಂದು ಕರೆಯುತ್ತಿದ್ದರು. ತಿಣಗಳಿಗೆ ಅವುಗಳದ್ದೇ ಆದ ಭೌಗೋಳಿಕವಾದ ಕೆಲವು ವಿಶೇಷತೆಗಳಿದ್ದುವು. ಅವುಗಳು ಯಾವುವು ಎಂದು ನೋಡೋಣ.

| ತಿಣಗಳು | ಭೌಗೋಳಿಕ ವಿಶೇಷತೆಗಳು |
|---|---|
| ಕುರಿಂಞಿ | ಬೆಟ್ಟಗಳು/ ಅರಣ್ಯ ಪ್ರದೇಶಗಳು |
| ಮುಲ್ಲೈ | ಹುಲ್ಲುಗಾವಲು/ ಪೊದರು |
| ಪಾಲೈ | ಒಣಗಿದ ಜವುಗು ಪ್ರದೇಶ |
| ಮರುತ | ಬಯಲು |
| ನೆಯ್‌ತಲ್ | ತೀರಪ್ರದೇಶ |

ಕೇರಳದ ಮುಲ್ಲಶ್ಶೇರಿ, ಮರುತೂರು, ಪಾಲಕ್ಕಾಡು ಮೊದಲಾದ ಸ್ಥಳನಾಮಗಳನ್ನು ಕೇಳಿದ್ದೀರಲ್ಲವೇ? ಈ ಹೆಸರುಗಳು ತಿಣಗಳಿಗೆ ಸಂಬಂಧಿಸಿ ರೂಪುಗೊಂಡಿವೆ. ತಿಣಗಳ ಪಟ್ಟಿಯನ್ನು ನೋಡಿ ಈ ಹೆಸರುಗಳು ಯಾವುದರೊಂದಿಗೆ ಸಂಬಂಧಪಟ್ಟಿದೆ ಎಂದು ಕಂಡುಕೊಳ್ಳಬಹುದಲ್ಲವೆ.

ತಿಣಗಳಿಗೆ ಸಂಬಂಧಿಸಿದ ಸ್ಥಳನಾಮಗಳನ್ನು ಕಂಡುಹಿಡಿದು ಟಿಪ್ಪಣಿ ತಯಾರಿಸಿರಿ.

ಕುರಿಂಞಿ ಪ್ರದೇಶಗಳಲ್ಲಿ ಅಂದು ಧಾರಾಳವಾಗಿ ಕರಿಮೆಣಸಿನ ಕೃಷಿ ಮಾಡುತ್ತಿದ್ದರು. ಕರಿಮೆಣಸನ್ನು ಹುಡುಕಿಕೊಂಡು ವಿದೇಶೀಯರು ದಕ್ಷಿಣಭಾರತದ ಸಮುದ್ರತೀರದಲ್ಲಿರುವ ಪಟ್ಟಣಗಳಿಗೆ ಬಂದಿದ್ದರು. ಈ ಕಾಲಘಟ್ಟದ ಸವಿಶೇಷತೆಗಳನ್ನು ಅಂದಿನ ಕಾಲದ ಪ್ರಧಾನ ಕೃತಿಗಳಲ್ಲಿ ಪರಾಮರ್ಶಿಸಲಾಗಿದೆ.

ಕೆಳಗೆ ಕೊಟ್ಟಿರುವ ಪದ್ಯವನ್ನು ಗಮನಿಸಿರಿ. ಇವುಗಳು ಸಂಘಕಾಲದ ಕೃತಿಯಾದ ಪುರನಾನೂರಿನಿಂದ ಆರಿಸಿದ ಸಾಲುಗಳಾಗಿವೆ.

ಮೀನ್‌ವಿಟ್ಟ್ ಪಕರಂ ನೇಡಿಯ ನೆಲ್‌ಕುಂಬಾರಂ ಕೊಂಡ್
ವೀಡುಂ ಉಯರ್ನ್ನ ತೋಣಿಗಳುಂ
ತಿರಿಚ್ಚರಿಯಾನ್ ಪಾಡಿಲ್ಲಾದಾಯಿ
ಅಪ್ರಕಾರಂ ಕೂಟ್ಟಿಯಿಟ್ಟಿರಿಕ್ಕುನ್ನ ಮುಳಕ್‌ಚಾಕ್‌ಗಳ್
ಶಬ್ದಾಯಮಾನಮಾಯ ಕರಯಿಲ್‌ನಿನ್ನುಂ
ವೇರ್‌ತಿರಿಚ್ಚರಿಯಾನ್ ಕಯಿಯಾತೆ
ವಿಷಮಿಕ್ಕುಂ ಕಾಣುನ್ನ ಆಳುಕಳ್
ಕಪ್ಪಲುಗಳ್ ಕೊಂಡುವನ್ನ ಸ್ವರ್ಣಂ

ತೋಣಿಕಳ್ ವಯಿ ಕರಯಿಲೆತ್ತುನ್ನು
ಮಲಯಿಲ್ ನಿನ್ನ್ ಕಿಟ್ಟುನ್ನ ವಿಭವಜಳುಂ
ಕರಯಿಲ್ ನಿನ್ನ್ ಕಿಟ್ಟುನ್ನ ವಿಭವಜಳುಂ
ಚೇರ್ತ್ ಅರ್ಥಿಗಳ್ಕ್ಕ್ ಕೊಡುಕ್ಕುನ್ನು

ಈ ಪದ್ಯದಿಂದ ಯಾವೆಲ್ಲ ಮಾಹಿತಿಗಳು ಲಭಿಸುತ್ತವೆ?

- ತಿಣಗಳ ಉತ್ಪನ್ನಗಳನ್ನು ಕೈಬದಲಾಯಿಸುತ್ತಿದ್ದರು.
- ಕರಿಮೆಣಸಿನ ವ್ಯಾಪಾರವು ಬೃಹತ್‌ಪ್ರಮಾಣದಲ್ಲಿ ನಡೆಯುತ್ತಿತ್ತು.
- ಪ್ರತಿಫಲವಾಗಿ ಧಾರಾಳ ಚಿನ್ನ ಲಭಿಸಿತ್ತು.
- ಸಮುದ್ರದ ಮೂಲಕ ಬರುವವರೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿದ್ದರು.
- ಕರಿಮೆಣಸು ಅಲ್ಲದೆ ಇನ್ನಿತರ ವಸ್ತುಗಳನ್ನು ಹುಡುಕಿಯೂ ಗ್ರಾಹಕರು ಬಂದಿದ್ದರು.

ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ ಸೇರಿಸುವಿರಲ್ಲವೆ.



ಕಂಚಿನಯುಗದ ಕಾಲಘಟ್ಟದಿಂದ ಕಬ್ಬಿಣಯುಗಕ್ಕೆ ತಲುಪಿದಾಗ ಮಾನವನ ಜೀವನದಲ್ಲಿ ಯಾವೆಲ್ಲ ಬದಲಾವಣೆಗಳು ಉಂಟಾದುವು? ಚರ್ಚಿಸಿರಿ.



## ಕ್ರೋಡೀಕರಣ

- ಕ್ರಿ.ಪೂ. 1500 ರಿಂದ ಕ್ರಿ.ಪೂ.600ರ ವರೆಗಿನ ಕಾಲಘಟ್ಟವನ್ನು ವೇದಕಾಲ ಎಂದು ಕರೆಯುತ್ತಾರೆ.
- ವೇದಕಾಲವನ್ನು ಋಗ್ವೇದಕಾಲ ಹಾಗೂ ಅನಂತರದ ವೇದಕಾಲ ಎಂಬುದಾಗಿ ವಿಂಗಡಿಸಲಾಗಿದೆ.
- ಈ ಕಾಲಘಟ್ಟಗಳ ಜನಜೀವನ ಕ್ರಮಗಳಲ್ಲಿ ಹಲವಾರು ವ್ಯತ್ಯಾಸಗಳಿದ್ದುವು.
- ಭಾರತದಲ್ಲಿ ಕಬ್ಬಿಣದ ಉಪಯೋಗವು ಅನಂತರದ ವೇದಕಾಲದಲ್ಲಿ ವ್ಯಾಪಕವಾಯಿತು.
- ಇದರಿಂದಾಗಿ ಈ ಕಾಲಘಟ್ಟವನ್ನು ಭಾರತದ ಕಬ್ಬಿಣಯುಗ ಎಂದು ಹೆಸರಿಸಲಾಯಿತು.
- ಪ್ರಾಚೀನ ತಮಿಳಗಂನ ಕಬ್ಬಿಣಯುಗವನ್ನು ಮಹಾಶಿಲಾಯುಗ ನಾಗರಿಕತೆಯ ಕಾಲ ಎಂದು ಕರೆಯಲಾಗುತ್ತದೆ.
- ವ್ಯತ್ಯಸ್ತವಾದ ಭೌಗೋಳಿಕ ವಿಶೇಷತೆಗಳಿದ್ದ ತಿಣಗಳು ಪ್ರಾಚೀನ ತಮಿಳಗಂನ ಪ್ರಧಾನ ವೈಶಿಷ್ಟ್ಯಗಳಾಗಿವೆ.

## ಪ್ರಧಾನ ಕಲಿಕಾಸಾಧನೆಗಳಲ್ಲಿ ಒಳಪಡುವವುಗಳು

- ವೇದಗಳ ಕಾಲಘಟ್ಟವನ್ನು ವಿವರಿಸುವುದು.
- ಋಗ್ವೇದ ಕಾಲಘಟ್ಟದ ಜನರ ಜೀವನಕ್ರಮವನ್ನು ಕಂಡುಕೊಂಡು ಅದನ್ನು ಹರಪ್ಪ ನಾಗರಿಕತೆಯ ಜನಜೀವನಕ್ರಮದೊಂದಿಗೆ ಹೋಲಿಸುವುದು.
- ಅನಂತರದ ವೇದಕಾಲಘಟ್ಟದ ಜನಜೀವನಕ್ರಮವನ್ನು ಕಂಡುಕೊಂಡು ಅದನ್ನು ಋಗ್ವೇದ ಕಾಲದ ಜನಜೀವನಕ್ರಮದೊಂದಿಗೆ ಹೋಲಿಸುವುದು.
- ಮಹಾಶಿಲಾಯುಗ ನಾಗರಿಕತೆಯ ಕಾಲದ ವಿಶೇಷತೆಗಳನ್ನು ಕಂಡುಕೊಳ್ಳುವುದು.
- ತಿಣಗಳ ಪ್ರತ್ಯೇಕತೆಗಳನ್ನು ಪಟ್ಟಿಮಾಡುವುದು.

## ಮೌಲ್ಯನಿರ್ಣಯ ಮಾಡುವ

- ಋಗ್ವೇದಕಾಲ ಮತ್ತು ಅನಂತರದ ವೇದಕಾಲದ ಜನಜೀವನಕ್ರಮವನ್ನು ಹೋಲಿಸಿರಿ.
- ಸಂಘಕಾಲದ ಕೃತಿಗಳ ಪಟ್ಟಿಯನ್ನು ತಯಾರಿಸಿರಿ.
- ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ ‘ಎ’ ವಿಭಾಗಕ್ಕೆ ಸರಿಹೊಂದುವುದನ್ನು ‘ಬಿ’ ವಿಭಾಗದಿಂದ ಆರಿಸಿ ಬರೆಯಿರಿ.

| ಎ | ಬಿ |
|---|---|
| ಕುರಿಂಞಿ | ಒಣಪ್ರದೇಶ |
| ಮುಲ್ಲೈ | ಬಯಲು |
| ನೆಯ್‌ತಲ್ | ಬೆಟ್ಟಗಳು |
| ಪಾಲೈ | ಹುಲ್ಲುಗಾವಲು |
| ಮರುತ | ತೀರಪ್ರದೇಶ |

- ಕಬ್ಬಿಣವನ್ನು ಸಂಶೋಧನೆ ಮಾಡಿ ಉಪಕರಣಗಳನ್ನು ತಯಾರಿಸಿ ಉಪಯೋಗಿಸಲು ಆರಂಭಿಸಿದುದು ಮಾನವನ ಇತಿಹಾಸದ ಪ್ರಧಾನ ಕಾಲಘಟ್ಟವಾಗಿತ್ತು. ಸಮರ್ಥಿಸಿರಿ.

## ಮುಂದುವರಿದ ಚಟುವಟಿಕೆ

- ಮಹಾಶಿಲಾಸ್ಮಾರಕಗಳ ಚಿತ್ರಗಳನ್ನು ಸಂಗ್ರಹಿಸಿ, ಟಿಪ್ಪಣಿಯನ್ನೊಳಗೊಂಡ ಒಂದು ಆಲ್ಬಂ ತಯಾರಿಸಿರಿ.



# 8


# ಅಹಿಂಸೆ - ಅರಿವು - ಅಧಿಕಾರ

ಕಾಡುಂ ಪಡಲುಂ ವೆಣ್ಣೀರಾಕಿ
ಕನಕಕದಿರಿನು ವಳಮೇಗಿ
ಕಠಿಣಮಿರಂಬುಕುಳಂಬಾಕಿಪ್ಪಲ
ಕರುನಿರವಾರ್‌ತ್ತುಪಣಿಕ್ಕೇಗಿ
ಅರಿವಿನ್ ತಿರಿಕಳ್ ಕೊಳುತ್ತಿಕಲಕಳ್-
ಕಾವೇಶತ್ತಿನ್ ಚೂಡೇಗಿ
ಮಾಲೋಡಿಳಯುಂ ಮರ್ತ್ಯಾತ್ಮಾವಿನ್
ಮೇಲೋಟ್ಟುಯರಾನ್ ಚಿರಕುತಕಿ

- ವೈಲೋಪ್ಪಿಳ್ಳಿ

ಮೇಲೆ ಕೊಟ್ಟಿರುವ ಕವಿತೆಯ ಭಾಗವನ್ನು ಗಮನಿಸಿರಿ.

ಭಾರತದಲ್ಲಿ ಮಾನವ ಜೀವನವು ಹೇಗೆ ಪ್ರಗತಿಯನ್ನು ಹೊಂದಿತು ಎಂಬುದನ್ನು ಈ ಕವಿತೆಯ ಆಧಾರದಲ್ಲಿ ಚರ್ಚಿಸಿ ಕಂಡುಕೊಳ್ಳಿರಿ.ಗಂಗಾಬಯಲಿನ ಕಡೆಗೆ ಆರ್ಯರ ಮುನ್ನಡೆಯ ಕುರಿತು ನಾವು ಚರ್ಚಿಸಿದ್ದೇವಲ್ಲವೆ. ಕ್ರಿ.ಪೂ. ೬ನೇ ಶತಮಾನದಲ್ಲಿ ಆರ್ಯರು ಹೆಚ್ಚಿನ ಪ್ರದೇಶಗಳಿಗೆ ವ್ಯಾಪಿಸಿದಾಗ ಗಂಗಾಬಯಲಿನಲ್ಲಿ ಕೃಷಿವಲಯಗಳು ರೂಪುಗೊಂಡವು. ವಸ್ತುಗಳ ಕೈಬದಲಾವಣೆಯ ಕೇಂದ್ರಗಳೂ ನಗರಗಳೂ ಸೇರಿಕೊಂಡಿದ್ದ ಅವುಗಳನ್ನು ಜನಪದಗಳು ಎಂದು ಕರೆಯಲಾಯಿತು.ಇಂತಹ ಜನಪದಗಳು ಗೋದಾವರಿ ನದೀತೀರದವರೆಗೆ ವ್ಯಾಪಿಸಿಕೊಂಡಿದ್ದುವು. ಅವುಗಳಲ್ಲಿ ಪ್ರಬಲವಾದ ಹದಿನಾರು ಜನಪದಗಳನ್ನು ಮಹಾಜನಪದಗಳೆಂದು ಕರೆಯಲಾಯಿತು. ಇವುಗಳಲ್ಲಿ ಮಗಧವು ಪ್ರಧಾನವಾದ ಜನಪದವಾಗಿತ್ತು.ಕೆಳಗೆ ನೀಡಿರುವ ಭೂಪಟದಿಂದ ಮಗಧದ ಸ್ಥಾನವನ್ನು ಗುರುತಿಸಿರಿ.




**ಮಹಾಜನಪದಗಳು**

ಮಗಧ, ಅಂಗ, ವಜ್ಜಿ, ಮಲ್ಲ, ಕಾಶಿ, ವತ್ಸ, ಕೋಸಲ, ಚೇದಿ, ಪಾಂಚಾಲ, ಅಶ್ಮಕ, ಅವಂತಿ, ಶೂರಸೇನ, ಕುರು, ಮತ್ಸ್ಯ, ಗಾಂಧಾರ, ಕಾಂಬೋಜ ಎಂಬಿವುಗಳು ಹದಿನಾರು ಜನಪದಗಳಾಗಿದ್ದುವು.

JT 587-3/ Soc. Sci. (K)-5 (Vol-2)

ಮಗಧವು ಬೃಹತ್‌ಪ್ರಮಾಣದಲ್ಲಿ ಕಬ್ಬಿಣದ ಅದುರಿನ ನಿಕ್ಷೇಪವಿದ್ದ ಪ್ರದೇಶವಾಗಿತ್ತು. ಕಬ್ಬಿಣದ ಉಪಕರಣಗಳ ಹಾಗೂ ಆಯುಧಗಳ ಉಪಯೋಗವು ಮಗಧದ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರ ವಹಿಸಿತ್ತು. ಗಂಗಾನದೀ ತೀರದಲ್ಲಿದ್ದ ದಟ್ಟವಾದ ಕಾಡುಗಳನ್ನು ಕಡಿಯಲು ಕಬ್ಬಿಣದಿಂದ ತಯಾರಿಸಿದ ಕೊಡಲಿಯು ಸಹಾಯಕವಾಯಿತು. ಕಬ್ಬಿಣದ ನೇಗಿಲುಗಳನ್ನು ಉಪಯೋಗಿಸಿ ನೆಲವನ್ನು ಉಳಲು ಸಾಧ್ಯವಾಯಿತು. ಇದರ ಪರಿಣಾಮವಾಗಿ ಕೃಷಿ ಉತ್ಪಾದನೆಯು ಹೆಚ್ಚಿತು. ಅನಂತರ ವಾಣಿಜ್ಯರಂಗದಲ್ಲಿ ಉಂಟಾದ ಅಭಿವೃದ್ಧಿಯು ನಗರಗಳ ಬೆಳವಣಿಗೆಗೆ ಕಾರಣವಾದುವು. ಕೃಷಿ ಮತ್ತು ವಾಣಿಜ್ಯ ರಂಗದಲ್ಲಿ ಉಂಟಾದ ಮುನ್ನಡೆಯ ಮೂಲಕ ಮಗಧವು ಆರ್ಥಿಕ ಅಭಿವೃದ್ಧಿಯನ್ನು ಗಳಿಸಿತು. ಮಗಧದ ಅಪಾರ ಸಂಪತ್ತು ಬೃಹತ್ ಸೈನ್ಯವನ್ನು ರೂಪೀಕರಿಸಲು ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಾಧೀನಪಡಿಸಲು ರಾಜರಿಗೆ ಸಹಾಯಕವಾಯಿತು. ವಿವಿಧ ಕಾಲಗಳಲ್ಲಿ ಮಗಧವನ್ನು ಆಳಿದ ಆಡಳಿತಾಧಿಕಾರಿಗಳು ಇತರ ಮಹಾಜನಪದಗಳನ್ನು ಮಗಧದೊಂದಿಗೆ ಸೇರಿಸಿಕೊಂಡರು. ಹೀಗೆ ಮಗಧವು ವಿಶಾಲವಾದ ಒಂದು ಸಾಮ್ರಾಜ್ಯವಾಗಿ ಬದಲಾಯಿತು.


ಮಗಧವನ್ನು ಒಂದು ಪ್ರಬಲ ಶಕ್ತಿಯಾಗಿ ಬದಲಾಯಿಸಲು ಸಹಾಯಕವಾದ ಘಟಕಗಳು ಯಾವುವು?

- ಕಬ್ಬಿಣದ ಲಭ್ಯತೆ
- 
- 
- 

## ಅಹಿಂಸೆ

ಇದು ಮಗಧದ ಆಡಳಿತಾಧಿಕಾರಿಯಾಗಿದ್ದ ಬಿಂಬಿಸಾರನ ಘೋಷಣೆಯಾಗಿದೆ. ಇಂತಹ ಘೋಷಣೆಯನ್ನು ಹೊರಡಿಸಲು ಅವನನ್ನು ಪ್ರೇರೇಪಿಸಿದ ಅಂಶಗಳು ಯಾವುವು?


ಒಂದು ದೇಶ ಎಂಬ ನೆಲೆಯಲ್ಲಿ ಮಗಧದ ಬೆಳವಣಿಗೆಯಲ್ಲಿ ಕೃಷಿಯು ವಹಿಸಿದ ಪಾತ್ರದ ಕುರಿತು ತಿಳಿದಿರಲ್ಲವೇ.ಜಾನುವಾರುಗಳು ಕೃಷಿ ಕ್ಷೇತ್ರದ ತಳಹದಿಯಾಗಿದ್ದುವು. ನೆಲವನ್ನು ಉಳಲು ಹಾಗೂ ಗೊಬ್ಬರಕ್ಕೆ ಜಾನುವಾರುಗಳು ಅವಶ್ಯಕವಾಗಿದ್ದುವು. ಆದರೆ ಯಜ್ಞ ಯಾಗಾದಿಗಳ ಅಂಗವಾಗಿ ಬೃಹತ್ ಪ್ರಮಾಣದಲ್ಲಿ ಜಾನುವಾರುಗಳನ್ನು ಬಲಿಕೊಡುತ್ತಿದ್ದುದು ಕೃಷಿಯನ್ನು ಪ್ರತಿಕೂಲವಾಗಿ ಬಾಧಿಸಿತು. ಈ ಹಿನ್ನಲೆಯಲ್ಲಿ ಬಿಂಬಿಸಾರನು ಇಂತಹ ಒಂದು ಘೋಷಣೆಯನ್ನು ಹೊರಡಿಸಿದನು.



ಇದೇ ಕಾಲಘಟ್ಟದಲ್ಲಿ ಸಮಾಜದಲ್ಲಿ ನೆಲೆನಿಂತಿದ್ದ ಅಸಮಾನತೆಗೆದುರಾಗಿ ಜೈನಮತ ಮತ್ತು ಬೌದ್ಧಮತವು ಹುಟ್ಟಿಕೊಂಡಿತು. ವರ್ಧಮಾನ ಮಹಾವೀರನು ಪ್ರಚಾರಮಾಡಿದ ಜೈನಮತವೂ ಗೌತಮಬುದ್ಧನು ಸ್ಥಾಪಿಸಿದ ಬೌದ್ಧಮತವೂ ಅಹಿಂಸೆಗೆ ಪ್ರಾಧಾನ್ಯವನ್ನು ನೀಡಿದುವು. ವ್ಯಾಪಕವಾಗಿ ನಡೆಯುತ್ತಿದ್ದ ಪ್ರಾಣಿಬಲಿಯು ಮಹಾವೀರ ಮತ್ತು ಬುದ್ಧನಿಗೆ ಅಹಿಂಸೆಯನ್ನು ಪ್ರಚಾರಮಾಡಲು ಪ್ರೇರೇಪಣೆ ನೀಡಿತು.



ಮಹಾವೀರನ ಪ್ರತಿಮೆ



ಬುದ್ಧನ ಪ್ರತಿಮೆ

ಅವರು ತಮ್ಮ ತತ್ವಗಳನ್ನು ಜನಸಾಮಾನ್ಯರ ಭಾಷೆಗಳಲ್ಲಿ ಪ್ರಚಾರ ಮಾಡಿದರು. ಮಹಾವೀರನು ಪ್ರಾಕೃತ ಭಾಷೆಯನ್ನೂ ಬುದ್ಧನು ಪಾಲಿ ಭಾಷೆಯನ್ನೂ ಉಪಯೋಗಿಸಿದ್ದರು. ರಾಜಕುಟುಂಬದಲ್ಲಿ ಬೆಳೆದ ಬುದ್ಧನಿಗೂ ಮಹಾವೀರನಿಗೂ ಎಲ್ಲ ರೀತಿಯ ಸುಖಸೌಕರ್ಯಗಳು ಲಭಿಸಿದ್ದುವು. ಆದರೆ ಜನಸಾಮಾನ್ಯರ ಕಷ್ಟಗಳು ಅವರಿಗೆ ಬೇಸರವನ್ನೂ ನಿರಾಶೆಯನ್ನೂ ಉಂಟುಮಾಡಿದುವು. ಅವರು ಜನರ ಕಷ್ಟಗಳಿಗೆ ಪರಿಹಾರ ಮಾರ್ಗವನ್ನು ಹುಡುಕಿದರು.

| ಜೈನಮತದ ತತ್ವಗಳು | ಬೌದ್ಧಮತದ ತತ್ವಗಳು |
|---|---|
| • ಸರಿಯಾದ ಜ್ಞಾನ<br>• ಸರಿಯಾದ ವಿಶ್ವಾಸ<br>• ಸರಿಯಾದ ಪ್ರವೃತ್ತಿ | • ಇಹಲೋಕದ ಜೀವನವು ದುಃಖಕರವಾಗಿದೆ.<br>• ಆಸೆಯೇ ದುಃಖಕ್ಕೆ ಮೂಲ.<br>• ಆಸೆಯನ್ನು ತ್ಯಜಿಸಿದರೆ ದುಃಖವನ್ನು ಇಲ್ಲದಂತೆ ಮಾಡಬಹುದು.<br>• ಅಷ್ಟಾಂಗ ಮಾರ್ಗಗಳ ಅನುಷ್ಠಾನದ ಮೂಲಕ ಆಸೆಯನ್ನು ಇಲ್ಲದಂತೆ ಮಾಡಬಹುದು. |

ಜೈನ-ಬೌದ್ಧ ಮತಗಳು ಅಹಿಂಸೆಗೆ ಪ್ರಾಧಾನ್ಯ ನೀಡಲು ಕಾರಣಗಳಾವುವು?


## ಅಧಿಕಾರ ವ್ಯಾಪಿಸುತ್ತಿದೆ


ರಾಷ್ಟ್ರೀಯ ಲಾಂಛನ

ಚಿತ್ರದ ಪರಿಚಯವಿದೆಯೇ? ನೀವು ಈ ಚಿತ್ರವನ್ನು ಎಲ್ಲಿ ನೋಡಿದ್ದೀರಿ? ಇದು ನಮ್ಮ ರಾಷ್ಟ್ರೀಯ ಲಾಂಛನ. ಅಶೋಕ ಚಕ್ರವರ್ತಿಯು ಸಾರನಾಥದಲ್ಲಿ ಸ್ಥಾಪಿಸಿದ ಸ್ತಂಭದಿಂದ ಈ ಲಾಂಛನವನ್ನು ಆರಿಸಲಾಗಿದೆ. ಇದರಲ್ಲಿರುವ ಅಶೋಕಚಕ್ರವನ್ನು ನಮ್ಮ ರಾಷ್ಟ್ರಧ್ವಜದ ಮಧ್ಯಭಾಗದಲ್ಲಿಯೂ ಕಾಣಬಹುದು.

ಅಶೋಕನು ಮಗಧವನ್ನು ಕೇಂದ್ರೀಕರಿಸಿ ಬೆಳೆದುಬಂದ ಮೌರ್ಯ ರಾಜವಂಶದ ಪ್ರಧಾನ ರಾಜನಾಗಿದ್ದನು. ಮೌರ್ಯ ರಾಜವಂಶವನ್ನು ಚಂದ್ರಗುಪ್ತ ಮೌರ್ಯನು ಸ್ಥಾಪಿಸಿದನು.

### ಅರ್ಥಶಾಸ್ತ್ರ


ಚಾಣಕ್ಯ

ಚಾಣಕ್ಯನು ಮೌರ್ಯಸಾಮ್ರಾಜ್ಯದ ಸ್ಥಾಪಕನಾಗಿದ್ದ ಚಂದ್ರಗುಪ್ತ ಮೌರ್ಯನ ಆಡಳಿತ ಸಲಹೆಗಾರನಾಗಿದ್ದನು. ಇವನನ್ನು ಕೌಟಿಲ್ಯ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಅರ್ಥಶಾಸ್ತ್ರವು ಚಾಣಕ್ಯನು ಬರೆದ ಪ್ರಸಿದ್ಧ ಗ್ರಂಥವಾಗಿದೆ. ಪ್ರಬಲವೂ ಕಾರ್ಯದಕ್ಷತೆಯಿಂದಲೂ ಕೂಡಿದ ಒಂದು ಆಡಳಿತ ರಚನೆಯು ಹೇಗಿರಬೇಕು ಎಂಬುದು ಈ ಗ್ರಂಥದ ತಿರುಳಾಗಿದೆ.


## ರಾಜನ ಧರ್ಮ

ಒಂದು ದೇಶದ ವಿವಿಧ ಜನರೊಳಗೆ ಐಕ್ಯವಿದ್ದರೆ ಮಾತ್ರವೇ ಅಲ್ಲಿ ಶಾಂತಿ ಇರಲು ಸಾಧ್ಯ. 'ಧರ್ಮ' ಎಂಬುದು ಇದಕ್ಕಾಗಿ ಅಶೋಕನು ಸ್ವೀಕರಿಸಿದ ತಂತ್ರವಾಗಿದೆ. ಜನರಲ್ಲಿ ಐಕ್ಯತೆಯನ್ನೂ ಸಹಿಷ್ಣುತೆಯನ್ನೂ ಬೆಳೆಸಿ ಸಾಮ್ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸಲು ರೂಪುಗೊಳಿಸಿದ ಆಶಯಗಳೇ 'ಧರ್ಮ' ಅವುಗಳಲ್ಲಿ ಕೆಲವನ್ನು ಕೆಳಗೆ ಕೊಡಲಾಗಿದೆ.

- ತಂದೆ ತಾಯಿಯರನ್ನು ಅನುಸರಿಸುವುದು.
- ಗುರುಗಳನ್ನು ಗೌರವಿಸುವುದು.
- ಪ್ರಾಣಿಬಲಿಯನ್ನು ಮಾಡದಿರುವುದು.
- ಎಲ್ಲ ಮತಗಳಲ್ಲೂ ಸಹಿಷ್ಣುತೆ ತೋರಿಸುವುದು.
- ಸಹವರ್ತಿಗಳೊಂದಿಗೆ ದಯೆ ತೋರಿಸುವುದು.

ಅಶೋಕ ಚಕ್ರವರ್ತಿಯ ಧರ್ಮ ಎಂಬ ಧೋರಣೆಯು ಇಂದು ಎಷ್ಟರಮಟ್ಟಿಗೆ ಔಚಿತ್ಯಪೂರ್ಣವಾಗಿದೆ ಎಂದು ಚರ್ಚಿಸಿರಿ.

ಅಶೋಕ ಚಕ್ರವರ್ತಿಯು ತನ್ನ ಧರ್ಮ, ತೀರ್ಮಾನ ಹಾಗೂ ಸೂಚನೆಗಳನ್ನು ಜನರಿಗೆ ತಿಳಿಸಲು ಅವುಗಳನ್ನು ಶಿಲೆಗಳಲ್ಲಿ ಕೆತ್ತಿ ಬರೆಸುತ್ತಿದ್ದನು. ಇಂತಹ ಶಿಲಾಶಾಸನಗಳನ್ನು ಪ್ರಧಾನ ರಸ್ತೆಗಳ ಬದಿಗಳಲ್ಲೂ ನಗರಕೇಂದ್ರಗಳಲ್ಲೂ ಸ್ಥಾಪಿಸಿದ್ದನು. ಬೌದ್ಧಮತವು ಅಶೋಕನಿಗೆ ಧರ್ಮವನ್ನು ಪ್ರಚಾರವಾಡಲು ಪ್ರೇರಣೆ ನೀಡಿತು.




ಅಶೋಕನ ಶಿಲಾಶಾಸನಗಳು

ಸಾಮ್ರಾಜ್ಯ ವಿಸ್ತರಣೆಗಾಗಿ ಅಶೋಕನು ಅನೇಕ ಯುದ್ಧಗಳನ್ನು ಮಾಡಿದನು. ಅದರಲ್ಲಿ ಕಳಿಂಗ ದೇಶದೊಂದಿಗೆ ನಡೆದ ಯುದ್ಧವು ಪ್ರಧಾನವಾದುದಾಗಿದೆ. ಈ ಯುದ್ಧದಲ್ಲಿ ಕಳಿಂಗವು ಪರಾಜಯ ಹೊಂದಿತು. ಅನೇಕ ಮಂದಿಯ ಮರಣ ಹಾಗೂ ಸಂಕಷ್ಟಗಳಿಗೆ ಕಾರಣವಾದ ಈ ಯುದ್ಧದ ನಂತರ ಅವನು ಬೌದ್ಧಮತವನ್ನು ಸ್ವೀಕರಿಸಿದನು. ಜಗತ್ತಿನ ವಿವಿಧ ಭಾಗಗಳಲ್ಲಿ ಬೌದ್ಧಮತವನ್ನು ಪ್ರಚಾರಮಾಡುವಲ್ಲಿ ಅವನು ಪ್ರಧಾನ ಪಾತ್ರವಹಿಸಿದನು.

## ಇನ್ನೊಂದು ಯುದ್ಧವು ಬೇಡ

ಚಕ್ರವರ್ತಿಯಾದ ಅನಂತರ ಅಶೋಕನು ತನ್ನ ಪೂರ್ವಜರ ಹಾದಿಯನ್ನೇ ಅನುಸರಿಸುತ್ತಾ ಯುದ್ಧಗಳ ಮೂಲಕ ಸಾಮ್ರಾಜ್ಯವನ್ನು ವಿಸ್ತರಿಸುತ್ತಲೇ ಇದ್ದನು. ತನಗೆ ಶರಣಾಗತನಾಗುವಂತೆ ಕಳಿಂಗದ ರಾಜನಿಗೆ ಅಶೋಕನು ಒಂದು ಸಂದೇಶವನ್ನು ಕಳುಹಿಸಿದನು. ಸ್ವಾಭಿಮಾನಿಯಾದ ಕಳಿಂಗದ ರಾಜನು ಶರಣಾಗತನಾಗಲು ಸಿದ್ಧನಾಗಿರಲಿಲ್ಲ. ಕ್ರಿ.ಪೂ. 261ರಲ್ಲಿ ಅಶೋಕನು ಸರ್ವಸನ್ನಾಹಗಳೊಂದಿಗೆ ಕಳಿಂಗವನ್ನು ಸೋಲಿಸಲು ಹೊರಟನು. ಸ್ವಾತಂತ್ರ್ಯ ಪ್ರೇಮಿಗಳಾದ ಕಳಿಂಗದ ಜನರು ಅಶೋಕನ ಆಕ್ರಮಣವನ್ನು ಒಗ್ಗಟ್ಟಿನಿಂದ ಎದುರಿಸಿದರು. ಅಶೋಕನ ನಿರೀಕ್ಷೆಗೂ ಮೀರಿ ಕಳಿಂಗವು ಹಲವು ಸಲ ಯುದ್ಧದಲ್ಲಿ ವಿಜಯದ ಸನಿಹಕ್ಕೆ ಬಂದಿತ್ತು. ಆದರೆ ಅಂತಿಮವಾಗಿ ಅಶೋಕನೇ ಯುದ್ಧದಲ್ಲಿ ಜಯಶಾಲಿಯಾದನು.ಯುದ್ಧ ಭೂಮಿಯು ಎರಡೂ ಕಡೆಯ ಸೈನಿಕರ ಮೃತದೇಹಗಳಿಂದ ತುಂಬಿಕೊಂಡಿತ್ತು. ರಣಾಂಗಣದ ಮೇಲೆ ಸುತ್ತುತ್ತಿರುವ ರಣಹದ್ದುಗಳು.... ಕೈಕಾಲುಗಳನ್ನು ಕಳೆದುಕೊಂಡು ವೇದನೆಯಿಂದ ನರಳುತ್ತಿರುವವರು... ಹೆತ್ತವರನ್ನು ಕಳೆದುಕೊಂಡ ಅನಾಥ ಮಕ್ಕಳ ರೋದನ .. ವಿಧವೆಯರ ಕಣ್ಣೀರ ಹೊಳೆ.



ಕಳಿಂಗಯುದ್ಧ- ಚಿತ್ರಕಲಾವಿದನ ಕಲ್ಪನೆಯಲ್ಲಿ

ಯುದ್ಧದ ಅನಂತರದ ದೃಶ್ಯವು ಅಶೋಕನನ್ನು ಅಸ್ವಸ್ಥನನ್ನಾಗಿಸಿತು. ಈ ರೀತಿಯ ವಿಜಯವು ಅರ್ಥಶೂನ್ಯ ಎಂದು ಅವನು ಅರಿತುಕೊಂಡನು. ಹೆಚ್ಚೇನೂ ವಿಳಂಬವಿಲ್ಲದೆ ಅವನು ಬೌದ್ಧಮತದ ಅನುಯಾಯಿಯಾಗಿ ಬದಲಾಗಿ, ಅದರ ತತ್ವಗಳಿಗೆ ಪ್ರಾಧಾನ್ಯ ನೀಡಿ ಆಡಳಿತವನ್ನು ಮುಂದುವರಿಸಿದನು.

ಕಳಿಂಗ ಯುದ್ಧವು ಅಶೋಕ ಚಕ್ರವರ್ತಿಯ ಮೇಲೆ ಬೀರಿದ ಪ್ರಭಾವವನ್ನು ಬಿಂಬಿಸುವ ಸ್ಕಿಟ್ಟನ್ನು ತರಗತಿಯಲ್ಲಿ ಪ್ರದರ್ಶಿಸಿರಿ.

## ಸಮಾಜ, ಸಂಪತ್ತು, ಕಲೆ

ಮೌರ್ಯರ ಕಾಲಘಟ್ಟದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಜೀವನವು ಹೇಗಿತ್ತು ಎಂಬುದನ್ನು ನೋಡೋಣ.

- ಚತುರ್ವರ್ಣದ ಆಧಾರದಲ್ಲಿ ಸಾಮಾಜಿಕ ವಿಭಜನೆ ನೆಲೆ ನಿಂತಿತ್ತು.
- ಕೃಷಿ ಕೆಲಸಗಳನ್ನು ಶೂದ್ರರಿಂದ ಮಾಡಿಸುತ್ತಿದ್ದರು.
- ಜೈನಮತ ಹಾಗೂ ಬೌದ್ಧಮತಗಳು ಹೆಚ್ಚು ಪ್ರಚಾರ ಹೊಂದಿದುವು.
- ಮೌರ್ಯರ ಆಡಳಿತ ಕಾಲದಲ್ಲಿ ಕೃಷಿ ಹಾಗೂ ವ್ಯಾಪಾರ ಅಭಿವೃದ್ಧಿಹೊಂದಿತ್ತು.
- ಕೃಷಿಯ ಅಭಿವೃದ್ಧಿಗಾಗಿ ರಾಜರುಗಳು ನೀರಾವರಿ ಸೌಕರ್ಯಗಳನ್ನು ಮಾಡಿದ್ದರು.
- ಹೊಲಿಗೆ, ನೇಯ್ಗೆ ಮುಂತಾದ ಕೈಕಸುಬುಗಳೂ ಇದ್ದುವು.
- ನಾಣ್ಯಗಳು ಬಳಕೆಯಲ್ಲಿದ್ದುವು.
- ವ್ಯಾಪಾರದ ಅಭಿವೃದ್ಧಿಗಾಗಿ ಅನೇಕ ರಸ್ತೆಗಳನ್ನು ನಿರ್ಮಿಸಿದ್ದರು.

ಅಶೋಕನು ಸಾಂಚಿಯಲ್ಲಿ ಸ್ಥಾಪಿಸಿದ ಸ್ತೂಪ ಈ ಚಿತ್ರದಲ್ಲಿದೆ. ಮೌರ್ಯರ ಕಾಲದಲ್ಲಿ ಇಂತಹ ಅನೇಕ ಸ್ತೂಪಗಳನ್ನು ನಿರ್ಮಿಸಲಾಯಿತು. ಇವುಗಳಲ್ಲದೆ ಅರಮನೆಗಳನ್ನೂ ಸಾರನಾಥದಲ್ಲಿರುವಂತಹ ಸ್ತಂಭಗಳನ್ನೂ ಮೌರ್ಯರಾಜರು ನಿರ್ಮಿಸಿದ್ದರು. ಇಂತಹ ಸ್ಮಾರಕಗಳು ಮೌರ್ಯರ ಕಾಲದಲ್ಲಿ ವಾಸ್ತುವಿದ್ಯೆ ಹಾಗೂ ಶಿಲ್ಪವಿದ್ಯೆಗಳಲ್ಲಿ ಉಂಟಾದ ಅಭಿವೃದ್ಧಿಯನ್ನು ಸೂಚಿಸುತ್ತವೆ.



ಸಾಂಚಿಯ ಸ್ತೂಪ



ಮೌರ್ಯರ ಆಡಳಿತಕಾಲದ ಜೀವನಕ್ರಮವನ್ನು ಅನಂತರದ ವೇದಕಾಲದ ಜೀವನಕ್ರಮದೊಂದಿಗೆ ಹೋಲಿಸಿರಿ.

## ಕಾಲ ಬದಲಾಗುತ್ತಿದೆ

ಮೌರ್ಯರ ಆಡಳಿತದ ಪತನದ ನಂತರ ಕ್ರಿ. ಶ. 4ನೇ ಶತಮಾನದಲ್ಲಿ ಗಂಗಾತೀರದಲ್ಲಿ ಗುಪ್ತರಾಜವಂಶವು ಪ್ರಬಲ ರಾಜವಂಶವಾಗಿ ತಲೆಯೆತ್ತಿತು. ಒಂದನೇ ಚಂದ್ರಗುಪ್ತ, ಸಮುದ್ರಗುಪ್ತ, ಎರಡನೇ ಚಂದ್ರಗುಪ್ತ ಮೊದಲಾದವರು ಈ ರಾಜವಂಶದ ಹೆಸರಾಂತ ಆಡಳಿತಾಧಿಕಾರಿಗಳಾಗಿದ್ದರು.

ಗುಪ್ತರ ಕಾಲದ ಕೊನೆಯಲ್ಲಿ ದೂರದ ದೇಶಗಳೊಂದಿಗಿನ ವ್ಯಾಪಾರವು ಕುಂಠಿತಗೊಂಡಿತು. ಹೆಚ್ಚಿನ ಜನರು ಕೃಷಿಯಲ್ಲೇ ನಿರತರಾದರು. ಆ ಕಾಲದಲ್ಲಿ ರಾಜರು ಬೃಹತ್ ಪ್ರಮಾಣದಲ್ಲಿ ಭೂಮಿಯನ್ನು ಪುರೋಹಿತರಿಗೂ, ದೇವಾಲಯಗಳಿಗೂ ದಾನವಾಗಿ ಕೊಟ್ಟರು. ಪುರೋಹಿತರು ಕೃಷಿ ಕಾರ್ಮಿಕರ ಮೂಲಕ ಇಲ್ಲಿ ಕೃಷಿ ಮಾಡಿಸಿದರು. ಸಾಮಾಜಿಕ ಅಸಮತ್ವವು ಹೆಚ್ಚಾಯಿತು. ಇದರಿಂದ ಪುರೋಹಿತ ವರ್ಗವು ಪ್ರಬಲವಾಯಿತು ಹಾಗೂ ಬೌದ್ಧ- ಜೈನಮತಗಳ ಪ್ರಚಾರವು ಕಡಿಮೆಯಾಯಿತು.



ಮೌರ್ಯರ ಹಾಗೂ ಗುಪ್ತರ ಕಾಲದ ಸಾಮಾಜಿಕ, ಆರ್ಥಿಕ ಜೀವನವನ್ನು ಹೋಲಿಸಿರಿ.

## ಅರಿವಿನ ವಿಕಾಸ

ಗುಪ್ತರ ಕಾಲದಲ್ಲಿ ಸಂಸ್ಕೃತಭಾಷೆಯಲ್ಲಿ ಅನೇಕ ಕೃತಿಗಳನ್ನು ರಚಿಸಲಾಯಿತು. ಕಾಳಿದಾಸನು ಆ ಕಾಲದಲ್ಲಿದ್ದ ಸಾಹಿತಿಗಳಲ್ಲಿ ಪ್ರಮುಖನಾಗಿದ್ದನು. ಅಭಿಜ್ಞಾನ ಶಾಕುಂತಳ, ಮೇಘಸಂದೇಶ, ಕುಮಾರಸಂಭವ ಮೊದಲಾದುವುಗಳು ಅವನ ಪ್ರಧಾನ ಕೃತಿಗಳಾಗಿವೆ.



**ನವರತ್ನಗಳು**

ಎರಡನೇ ಚಂದ್ರಗುಪ್ತನ ಅರಮನೆಯಲ್ಲಿದ್ದ ಒಂಭತ್ತು ಮಂದಿ ಪಂಡಿತರನ್ನು 'ನವರತ್ನಗಳು' ಎಂದು ಕರೆಯುತ್ತಾರೆ. ಕಾಳಿದಾಸ, ಘಟಕರ್ಪರ, ಕ್ಷಪಣಕ, ವರರುಚಿ, ವರಾಹಮಿಹಿರ, ವೇತಾಳಭಟ್ಟ, ಧನ್ವಂತರಿ, ಅಮರಸಿಂಹ ಮತ್ತು ಶಂಕು ಇವರು ಆ ಒಂಭತ್ತು ಮಂದಿ ಪಂಡಿತರಾಗಿದ್ದಾರೆ.



ಮೆಹ್ರೂಲಿಯ ಕಬ್ಬಿಣದ ಸ್ತಂಭ

ಚಿತ್ರದಲ್ಲಿ ಕಾಣುವ ಕಬ್ಬಿಣದ ಸ್ತಂಭವನ್ನು ಗಮನಿಸಿದಿರಲ್ಲವೆ. ಡೆಲ್ಲಿಯ ಸಮೀಪದ ಮೆಹ್ರೂಲಿಯಲ್ಲಿರುವ ಈ ಸ್ತಂಭವನ್ನು ಎರಡನೇ ಚಂದ್ರುಗುಪ್ತನ ಕಾಲದಲ್ಲಿ ಸ್ಥಾಪಿಸಲಾಗಿತ್ತು.

ತೀಕ್ಷ್ಣವಾದ ಬಿಸಿಲು,ಮಳೆ ಹಾಗೂ ದಟ್ಟವಾದ ಮಂಜು ತಾಗಿದರೂ ಈ ಸ್ತಂಭ ಇಂದಿಗೂ ತುಕ್ಕು ಹಿಡಿಯದೇ ನಿಂತಿದೆ ಎಂದರೆ ಅದ್ಭುತ ಎಂದೆನಿಸುವುದಿಲ್ಲವೆ? ಈ ಕಬ್ಬಿಣದ ಸ್ತಂಭ ಗುಪ್ತರಕಾಲದ ಉಕ್ಕು ಸಂಸ್ಕರಣೆಯ ಪ್ರಾವೀಣ್ಯವನ್ನು ಸ್ಪಷ್ಟಪಡಿಸುತ್ತದೆ.

ಗುಪ್ತರ ಕಾಲದಲ್ಲಿ ವಿಜ್ಞಾನಕ್ಷೇತ್ರದಲ್ಲಿ ಗಣನೀಯವಾದ ಕೊಡುಗೆಗಳನ್ನು ನೀಡಿದವರಲ್ಲಿ ವರಾಮಿಹಿರ, ಬ್ರಹ್ಮಗುಪ್ತ, ಭಾಸ್ಕರಾಚಾರ್ಯ, ಆರ್ಯಭಟ ಮೊದಲಾದವರು ಪ್ರಮುಖರಾಗಿದ್ದಾರೆ. ಇವರಲ್ಲಿ ವರಾಮಿಹಿರ, ಬ್ರಹ್ಮಗುಪ್ತ ಮೊದಲಾದವರು ಜ್ಯೋತಿಶಾಸ್ತ್ರದಲ್ಲೂ, ಭಾಸ್ಕರಾಚಾರ್ಯನು ಗಣಿತಶಾಸ್ತ್ರದಲ್ಲೂ, ಆರ್ಯಭಟನು ಜ್ಯೋತಿಶಾಸ್ತ್ರ ಹಾಗೂ ಗಣಿತಶಾಸ್ತ್ರಗಳೆರಡರಲ್ಲೂ ಗಣನೀಯವಾದ ಕೊಡುಗೆಗಳನ್ನು ನೀಡಿದ್ದರು.

ಗುಪ್ತರಕಾಲದಲ್ಲಿ ಜೀವಿಸಿದ್ದ ಪ್ರಸಿದ್ಧರಾದ ಕೆಲವು ವ್ಯಕ್ತಿಗಳ ಹೆಸರುಗಳನ್ನು ಪಟ್ಟಿಯಲ್ಲಿ ಕೊಡಲಾಗಿದೆ. ಅವರು ಯಾವ ಯಾವ ಕ್ಷೇತ್ರಗಳಲ್ಲಿ ಪ್ರಸಿದ್ಧರಾಗಿದ್ದರು ಎಂದು ಬರೆಯಿರಿ.


| ವ್ಯಕ್ತಿಗಳು | ಕ್ಷೇತ್ರಗಳು |
|---|---|
| ಆರ್ಯಭಟ | |
| ಕಾಳಿದಾಸ | |
| ವರಾಹಮಿಹಿರ | |
| ಭಾಸ್ಕರಾಚಾರ್ಯ | |
| ಬ್ರಹ್ಮಗುಪ್ತ | |

ಚಿತ್ರದಲ್ಲಿ ಕಾಣುವುದು ಪ್ರಾಚೀನ ಭಾರತದ ಪ್ರಸಿದ್ಧ ಶಿಕ್ಷಣಕೇಂದ್ರವಾಗಿದ್ದ ನಲಂದ ವಿಶ್ವವಿದ್ಯಾನಿಲಯದ ಅವಶೇಷಗಳಾಗಿವೆ. ಇದನ್ನು ಗುಪ್ತರ ಕಾಲದಲ್ಲಿ ಸ್ಥಾಪಿಸಲಾಯಿತು. ಏಷ್ಯಾದ ವಿವಿಧ ಭಾಗಗಳಿಂದ ಇಲ್ಲಿಗೆ ವಿದ್ಯಾರ್ಥಿಗಳು ಬರುತ್ತಿದ್ದರು. ಇಲ್ಲಿ ಸಾವಿರಾರು ವಿದ್ಯಾರ್ಥಿಗಳೂ ನೂರಾರು ಅಧ್ಯಾಪಕರೂ ಇದ್ದರು.



ನಲಂದ ವಿಶ್ವವಿದ್ಯಾನಿಲಯದ ಅವಶೇಷಗಳು

ಈ ಪಾಠಭಾಗದಲ್ಲಿ ನಾವು ಪರಿಚಯಿಸಿದ ಕೆಲವು ಸ್ಮಾರಕಗಳ ಚಿತ್ರಗಳನ್ನು ಕೆಳಗೆ ಕೊಡಲಾಗಿದೆ. ಅವುಗಳು ಯಾವ ಕ್ಷೇತ್ರದ ಅಭಿವೃದ್ಧಿಯನ್ನು ಸೂಚಿಸುತ್ತವೆ?

| ಸ್ಮಾರಕಗಳು | ಕ್ಷೇತ್ರಗಳು |
|---|---|
|  | |
|  | |
|  | |
|  | |
|  | |



ಪ್ರಾಚೀನ ಭಾರತದಲ್ಲಿ ಗುಪ್ತರಕಾಲವು ವಿಜ್ಞಾನ, ಕಲೆ, ಸಾಹಿತ್ಯ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಗಮನಾರ್ಹವಾದ ಕಾಲವಾಗಿತ್ತು. ವಿಶದೀಕರಿಸಿರಿ.

ಮಗಧದ ಅಭಿವೃದ್ಧಿಯಿಂದ ತೊಡಗಿ ಗುಪ್ತರಕಾಲದ ವರೆಗಿನ ಸಾಮಾಜಿಕ ಬದಲಾವಣೆಗಳ ಕುರಿತು ನಾವು ಚರ್ಚಿಸಿದೆವಲ್ಲವೆ. ಅವುಗಳಲ್ಲಿ ಪ್ರಧಾನವಾದವುಗಳು ಯಾವುವು ಎಂದು ನೋಡೋಣ.

- ಕೃಷಿ ವ್ಯಾಪಕವಾಗುವುದರೊಂದಿಗೆ ಕೃಷಿ ಉತ್ಪಾದನೆ ಹೆಚ್ಚಿತು.
- ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಕಸುಬುಗಳು ಅನೇಕ ಹೊಸ ತಿಳುವಳಿಕೆಗಳನ್ನು ಉಂಟುಮಾಡಿದುವು.
- ಸಾಮಾಜಿಕ ಅಸಮತ್ವಕ್ಕೆದುರಾಗಿ ತಲೆಎತ್ತಿದ್ದ ಆಶಯಗಳು ಸಮಾಜ ಹಾಗೂ ರಾಜ್ಯಾಡಳಿತದ ಮೇಲೆ ಪ್ರಭಾವ ಬೀರಿದುವು.
- ವಿಜ್ಞಾನ, ಕಲೆ, ಸಾಹಿತ್ಯ ಎಂಬೀ ಕ್ಷೇತ್ರಗಳಲ್ಲಿ ಉಂಟಾದ ಬದಲಾವಣೆಗಳನ್ನು ಆಡಳಿತಾಧಿಕಾರಿಗಳು ಪ್ರೋತ್ಸಾಹಿಸಿದರು.



## ಕ್ರೋಡೀಕರಣ

- ಸ್ಥಿರವಾಸ ಹಾಗೂ ಕೃಷಿಯ ವ್ಯಾಪಕತೆಯು ಮಹಾಜನಪದಗಳ ಉದಯಕ್ಕೆ ಕಾರಣವಾಯಿತು.
- ಕ್ರಿ.ಪೂ. 6ನೇ ಶತಮಾನದಲ್ಲಿ ಜೈನಮತ, ಬೌದ್ಧಮತ ಎಂಬಿವುಗಳು ಹುಟ್ಟಿಕೊಂಡವು.
- ಹದಿನಾರು ಮಹಾಜನಪದಗಳಲ್ಲಿ ಪ್ರಧಾನ ಜನಪದವಾಗಿ ಬದಲಾದ ಮಗಧವು ಮೌರ್ಯರ ಆಡಳಿತದ ಕೇಂದ್ರವಾಗಿ ಬೆಳೆಯಿತು.
- ಗುಪ್ತರ ಕಾಲಘಟ್ಟದಲ್ಲಿ ಸಾಹಿತ್ಯ, ಕಲೆ, ವಿಜ್ಞಾನ, ಶಿಕ್ಷಣ ಎಂಬೀ ಕ್ಷೇತ್ರಗಳಲ್ಲಿ ಅಭಿವೃದ್ಧಿ ಉಂಟಾಯಿತು.
- ನಲಂದ ವಿಶ್ವವಿದ್ಯಾನಿಲಯವು ಪ್ರಾಚೀನ ಭಾರತದ ಪ್ರಧಾನ ಶಿಕ್ಷಣ ಕೇಂದ್ರವಾಗಿತ್ತು.



## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಪ್ರಾಚೀನ ಭಾರತದಲ್ಲಿ ನೆಲೆನಿಂತಿದ್ದ ಮಹಾಜನಪದಗಳನ್ನು ಕಂಡುಕೊಳ್ಳುವುದು.
- ಮಗಧದ ಬೆಳವಣಿಗೆಗೆ ಕಾರಣವಾದ ಘಟಕಗಳನ್ನು ಕಂಡುಕೊಳ್ಳುವುದು.
- ಬೌದ್ಧಮತ ಹಾಗೂ ಜೈನಮತಗಳ ಉದಯಕ್ಕೆ ಕಾರಣವಾದ ಸನ್ನಿವೇಶಗಳನ್ನು ತಿಳಿದುಕೊಳ್ಳುವುದು.
- ಮೌರ್ಯರ ಆಡಳಿತಕಾಲವನ್ನು ವಿಶ್ಲೇಷಿಸುವುದು.
- ಗುಪ್ತರ ಕಾಲಘಟ್ಟದಲ್ಲಿ ಕಲೆ, ಸಾಹಿತ್ಯ, ವಿಜ್ಞಾನ ಎಂಬೀ ಕ್ಷೇತ್ರಗಳಲ್ಲಿ ಉಂಟಾದ ಅಭಿವೃದ್ಧಿಯನ್ನು ಅವಲೋಕಿಸುವುದು.
- ಗುಪ್ತರಕಾಲಘಟ್ಟದ ಸಾಮಾಜಿಕ, ಆರ್ಥಿಕ ಜೀವನವನ್ನು ಮೌರ್ಯರ ಕಾಲದೊಂದಿಗೆ ಹೋಲಿಸುವುದು.



## ಮೌಲ್ಯನಿರ್ಣಯ ಮಾಡುವ

- ಬೌದ್ಧಮತ ಮತ್ತು ಜೈನಮತಗಳ ಉದಯವು ಆ ಕಾಲದ ಅಗತ್ಯವಾಗಿತ್ತು ಎಂದು ಹೇಳಬಹುದೆ? ವಿಶದೀಕರಿಸಿರಿ.
- ಮಗಧದ ಬೆಳವಣಿಗೆಗೆ ಕಾರಣವಾದ ಘಟಕಗಳನ್ನು ವಿಶದೀಕರಿಸಿರಿ.
- ಜನಪದಗಳ ರೂಪೀಕರಣದಲ್ಲಿ ಕೃಷಿ ರಂಗದ ಪಾತ್ರವೇನಾಗಿತ್ತು?

- ಅಶೋಕನ 'ಧರ್ಮ' ಏನೆಂದು ವಿಶದೀಕರಿಸಿರಿ.
- ಗುಪ್ತರ ಕಾಲದಲ್ಲಿ ವಿಜ್ಞಾನ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಉಂಟಾದ ಬೆಳವಣಿಗೆಯನ್ನು ವಿಶದೀಕರಿಸಿರಿ.



## ಮುಂದುವರಿದ ಚಟುವಟಿಕೆಗಳು

- ರಾಷ್ಟ್ರೀಯ ಲಾಂಛನವನ್ನು ಮುದ್ರಿಸಿರುವ ವಸ್ತುಗಳು/ ಸಾಮಗ್ರಿಗಳು ಯಾವುವು? ಕಂಡುಹಿಡಿದು ಪಟ್ಟಿ ಮಾಡಿರಿ.
- ಪ್ರಾಚೀನ ಭಾರತದ ಸಾಹಿತಿಗಳನ್ನೂ ಅವರ ಕೃತಿಗಳನ್ನೂ ಪಟ್ಟಿಮಾಡಿರಿ.
- ಜಾತಕ ಕಥೆಗಳು, ಪಂಚತಂತ್ರ ಕಥೆಗಳು, ವಿಕ್ರಮಾದಿತ್ಯನ ಕಥೆಗಳು ಎಂಬಿವುಗಳನ್ನು ಸಂಗ್ರಹಿಸಿ ಓದಿರಿ.





9

# ಜನರು ಜನರಿಗಾಗಿ




ಗ್ರಾಮಸಭೆಯ ಕುರಿತು ನೀವು ಕೇಳಿರುವಿರಾ?
ಮೇಲೆ ನೀಡಿರುವುದು ಒಂದು ಗ್ರಾಮ ಸಭೆಯ ಚಿತ್ರವಾಗಿದೆ.
ನಿಮ್ಮ ಊರಿನಲ್ಲೂ ಗ್ರಾಮಸಭೆ ನಡೆಯುವುದಿಲ್ಲವೇ?ಇದರಲ್ಲಿ ಯಾರೆಲ್ಲ ಭಾಗವಹಿಸಿತ್ತಾರೆಂದೂ ಅಲ್ಲಿ ಚರ್ಚಿಸುವ ವಿಷಯಗಳು ಯಾವುವೆಂದೂ ಹೇಳಬಹುದೆ?


ಗ್ರಾಮಸಭೆಯು ವಾರ್ಡುಮಟ್ಟದ ಅಭಿವೃದ್ಧಿ ಕಾರ್ಯಗಳನ್ನು ತೀರ್ಮಾನಿಸಲಿರುವ ವೇದಿಕೆಯಾಗಿದೆ. ನಗರಗಳಲ್ಲಿ ಇದನ್ನು 'ವಾರ್ಡು ಸಭೆ' ಎಂದು ಕರೆಯುವರು. ವಾರ್ಡಿನ ಎಲ್ಲ ಮತದಾರರಿಗೂ ಗ್ರಾಮಸಭೆ/ವಾರ್ಡು ಸಭೆಯಲ್ಲಿ ಭಾಗವಹಿಸಬಹುದು. ಚರ್ಚೆಗಳಲ್ಲಿ ಭಾಗಿಗಳಾಗಿ ಅಭಿಪ್ರಾಯಗಳನ್ನು ಹೇಳಲು ಅವರಿಗೆ ಅವಕಾಶಗಳಿವೆ. ವಾರ್ಡಿನಲ್ಲಿ ಜಾರಿಗೊಳಿಸಬೇಕಾದ ಅಭಿವೃದ್ಧಿಕಾರ್ಯಗಳ ಬಗ್ಗೆ ಜನರು ಗ್ರಾಮಸಭೆಯಲ್ಲಿ ಒಟ್ಟಾಗಿ ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳುತ್ತಾರೆ. ವಾರ್ಡಿನ ಜನರು ಆಯ್ಕೆ ಮಾಡಿದ ಜನಪ್ರತಿನಿಧಿಗಳು ಈ ರೀತಿಯ ಚಟುವಟಿಕೆಗಳಿಗೆ ನೇತೃತ್ವ ನೀಡುತ್ತಾರೆ. ಈ ಜನಪ್ರತಿನಿಧಿಗಳನ್ನು ಪಂಚಾಯತುಗಳಲ್ಲಿ 'ವಾರ್ಡು ಮೆಂಬರ್' ಎಂದೂ ನಗರಸಭೆಗಳಲ್ಲಿ ಕೌನ್ಸಿಲರ್ ಎಂದೂ ಕರೆಯುತ್ತಾರೆ. ಬೇರೆ ಯಾವ ಯಾವ ಕಡೆಗಳಲ್ಲಿ ಈ ರೀತಿಯಾಗಿ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ವಿಧಾನವನ್ನು ಕಾಣಬಹುದು?

- ತರಗತಿ/ಸ್ಕೂಲ್‌ಲೀಡರ್
- ಸಹಕಾರಿ ಸಂಘ
- ಕ್ಲಬ್/ ವಾಚನಾಲಯ
- ಬ್ಲೋಕ್ ಪಂಚಾಯತು
- ಜಿಲ್ಲಾ ಪಂಚಾಯತು
- ರಾಜ್ಯ ಶಾಸನ ಸಭೆ
- ಪಾರ್ಲಿಮೆಂಟ್
- 

ಗ್ರಾಮಸಭೆಯಲ್ಲಿ ಜನರಿಗೆ ನೇರವಾಗಿ ಭಾಗಿಗಳಾಗಲು ಮತ್ತು ತೀರ್ಮಾನಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಆದರೆ ರಾಜ್ಯ ಮಟ್ಟದಲ್ಲೂ ರಾಷ್ಟ್ರಮಟ್ಟದಲ್ಲೂ ಜನರು ಆಯ್ಕೆ ಮಾಡಿದ ಪ್ರತಿನಿಧಿಗಳು ಒಟ್ಟಾಗಿ ತೀರ್ಮಾನಗಳನ್ನು ಕೈಗೊಳ್ಳುತ್ತಾರೆ. ಜನರು ನೇರವಾಗಿ ಅಥವಾ ಜನರಿಂದ ಚುನಾಯಿತರಾದ ಪ್ರತಿನಿಧಿಗಳು ಜನರಿಗಾಗಿ ಆಡಳಿತ ನಡೆಸುವ ಪ್ರಕ್ರಿಯೆಯು ಪ್ರಜಾಪ್ರಭುತ್ವವಾಗಿದೆ.

ಪ್ರಜಾಪ್ರಭುತ್ವ ಆಡಳಿತೆಯು ಜನರ ಅಭಿಲಾಷೆಗಳಿಗೆ ಅನುಗುಣವಾಗಿರಬೇಕು.

**- ಮಹಾತ್ಮಾಗಾಂಧಿ**





ಜನರಿಗಾಗಿ ಜನರಿಂದ ನಡೆಸಲ್ಪಡುವ ಜನರ ಆಡಳಿತವೇ ಪ್ರಜಾಪ್ರಭುತ್ವ.

**- ಅಬ್ರಹಾಂ ಲಿಂಕನ್**

ಪ್ರಜಾಪ್ರಭುತ್ವವು ಜಾಗತಿಕ ಮನ್ನಣೆಗಳಿಸುತ್ತಿರುವ ಏಕೈಕ ಆಡಳಿತ ವ್ಯವಸ್ಥೆಯಾಗಿದೆ.

**- ಅಮರ್ತ್ಯಸೇನ್**



ಪ್ರಜಾಪ್ರಭುತ್ವದ ಕೆಲವು ವಿಶೇಷತೆಗಳನ್ನು ಮತ್ತು ಪ್ರಜಾಪ್ರಭುತ್ವದ ಕುರಿತು ಕೆಲವು ಮಹಾನ್ ವ್ಯಕ್ತಿಗಳ ಉಲ್ಲೇಖಗಳನ್ನು ಓದಿದಿರಲ್ಲವೆ. ಪ್ರಜಾಪ್ರಭುತ್ವ ಎಂದರೆ ಏನು ಎಂಬುದನ್ನು ನೋಡೋಣ. ಜನರು ನೇರವಾಗಿ ಅಥವಾ ಜನರಿಂದ ಚುನಾಯಿತರಾದ ಪ್ರತಿನಿಧಿಗಳು ಜನರಿಗಾಗಿ ಆಡಳಿತ ನಡೆಸುವ ಪ್ರಕ್ರಿಯೆಯು ಪ್ರಜಾಪ್ರಭುತ್ವವಾಗಿದೆ.



## ಪ್ರಜಾಪ್ರಭುತ್ವ

ಪ್ರಜಾಪ್ರಭುತ್ವ ಎಂಬ ಅರ್ಥಬರುವ 'ಡೆಮೊಕ್ರಸಿ' ಎಂಬ ಇಂಗ್ಲಿಷ್ ಪದವು 'ಡೆಮೊಕ್ರಾಟಿಯ' ಎಂಬ ಗ್ರೀಕ್‌ಪದದಿಂದ ಉದ್ಭವಿಸಿದ್ದಾಗಿದೆ. ಇದು ಜನರು ಎಂಬ ಅರ್ಥಬರುವ 'ಡಮೊಸ್' (Demos), ಶಕ್ತಿ ಅಥವಾ ಅಧಿಕಾರ ಎಂಬ ಅರ್ಥ ಬರುವ 'ಕ್ರೆಟೋಸ್' (Kretos) ಎಂಬೀ ಗ್ರೀಕ್ ಪದಗಳು ಸೇರಿ ರೂಪುಗೊಂಡದ್ದಾಗಿದೆ.



## ಪ್ರತ್ಯಕ್ಷ ಪ್ರಜಾಪ್ರಭುತ್ವ ಮತ್ತು ಪರೋಕ್ಷ ಪ್ರಜಾಪ್ರಭುತ್ವ

ಪ್ರತ್ಯಕ್ಷ ಪ್ರಜಾಪ್ರಭುತ್ವವು ಜನರು ನೇರವಾಗಿ ಪ್ರಧಾನ ತೀರ್ಮಾನಗಳನ್ನು ಕೈಗೊಳ್ಳುವ ವ್ಯವಸ್ಥೆಯಾಗಿದೆ. ರಾಜ್ಯ ಶಾಸನ ಸಭೆ, ಪಾರ್ಲಿಮೆಂಟು ಎಂಬೀ ಕಡೆಗಳಲ್ಲಿ ಜನರು ನೇರವಾಗಿ ತೀರ್ಮಾನಗಳನ್ನು ಕೈಗೊಳ್ಳುವುದರ ಬದಲಾಗಿ ಅವರು ಚುನಾಯಿಸಿದ ಪ್ರತಿನಿಧಿಗಳು ಜನರಿಗಾಗಿ ತೀರ್ಮಾನಗಳನ್ನು ಕೈಗೊಳ್ಳುತ್ತಾರೆ. ಈ ರೀತಿಯ ಪ್ರತಿನಿಧಿ ಪ್ರಜಾಪ್ರಭುತ್ವವನ್ನು ಪರೋಕ್ಷ ಪ್ರಜಾಪ್ರಭುತ್ವ ಅಥವಾ ಪ್ರಾತಿನಿಧಿಕ ಪ್ರಜಾಪ್ರಭುತ್ವ ಎಂದು ಕರೆಯುತ್ತಾರೆ.

## ಪ್ರಜಾಪ್ರಭುತ್ವ ಮತ್ತು ಚುನಾವಣೆ

ಪ್ರಾದೇಶಿಕ ಮಟ್ಟದಿಂದ ಪಾರ್ಲಿಮೆಂಟಿನವರೆಗೆ ಆಡಳಿತ ನಡೆಸಬೇಕಾದ ಪ್ರತಿನಿಧಿಗಳನ್ನು ಜನರೇ ಚುನಾಯಿಸುತ್ತಾರೆ. ಪ್ರಾಯಪೂರ್ತಿಯಾದವರಿಗೆ ಸಾರ್ವತ್ರಿಕವಾಗಿ ಮತದಾನ ಮಾಡುವ ಹಕ್ಕನ್ನು ನೀಡುವ ಮೂಲಕ ಚುನಾವಣೆಯನ್ನು ನಡೆಸಲಾಗುವುದು. 18 ವರ್ಷ ಪ್ರಾಯ ಪೂರ್ತಿಯಾದ ಎಲ್ಲ ಭಾರತೀಯ ಪೌರರಿಗೂ ಮತದಾನದ ಹಕ್ಕು ಇದೆ. ಹೀಗೆ ಸ್ಥಳೀಯಾಡಳಿತ ಸಂಸ್ಥೆ, ವಿಧಾನ ಸಭೆ ಹಾಗೂ ಲೋಕಸಭೆಯ ಪ್ರತಿನಿಧಿಗಳನ್ನು ಜನರು ಮತದಾನದ ಮೂಲಕ ಆಯ್ಕೆ ಮಾಡುತ್ತಾರೆ. ಚುನಾವಣೆಯು ಪ್ರಜಾಪ್ರಭುತ್ವದ ಪ್ರಧಾನ ವಿಶೇಷತೆಗಳಲ್ಲೊಂದಾಗಿದೆ.

ಚುನಾವಣೆಗೆ ಸಂಬಂಧಿಸಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವಿರಲ್ಲವೇ.




- ನಿಮ್ಮ ಮನೆಯಲ್ಲಿ ಮತದಾನ ಮಾಡುವವರು ಯಾರೆಲ್ಲ?
- ನಿಮ್ಮ ವಿಧಾನಸಭಾಕ್ಷೇತ್ರ ಯಾವುದು?
- ನಿಮ್ಮ ವಿಧಾನಸಭಾಕ್ಷೇತ್ರದ ಶಾಸಕ (ಎಮ್.ಎಲ್.ಎ) ಯಾರು?
- ನಿಮ್ಮ ಲೋಕಸಭಾಕ್ಷೇತ್ರ ಯಾವುದು?
- ನಿಮ್ಮ ಲೋಕಸಭಾಕ್ಷೇತ್ರದ ಸಂಸದ (ಎಂ.ಪಿ) ಯಾರು?

## ಚುನಾವಣೆಯ ಹಂತಗಳು

ಶಾಲಾ ಪಾರ್ಲಿಮೆಂಟು ಚುನಾವಣೆಯ ಅಂಗವಾಗಿ ನಿಮ್ಮ ತರಗತಿಯ ನಾಯಕನ ಚುನಾವಣೆ ನಡೆದಿರಬಹುದಲ್ಲವೆ. ಇದೇ ರೀತಿಯಾಗಿ ನಮ್ಮ ದೇಶದ ಚುನಾವಣಾ ಪ್ರಕ್ರಿಯೆಯಲ್ಲಿ ಕಡ್ಡಾಯವಾಗಿ ಪಾಲಿಸಬೇಕಾದ ಕೆಲವು ಹಂತಗಳಿವೆ. ಇವುಗಳನ್ನು ಸೂಚಿಸುವ ಫ್ಲೋಚಾರ್ಟ್‌ನ್ನು ನೋಡಿರಿ.

ಚುನಾವಣೆಯ ಹಂತಗಳು

ಚುನಾವಣಾ ಘೋಷಣೆ ಹೊರಡಿಸುವುದು.
↓
ನಾಮಪತ್ರ ಸಲ್ಲಿಸುವುದು.
↓
ನಾಮಪತ್ರದ ಸೂಕ್ಷ್ಮಪರಿಶೀಲನೆ
↓
ನಾಮಪತ್ರ ಹಿಂತೆಗೆಯುವುದು.
↓
ಮತದಾನ
↓
ಮತ ಎಣಿಕೆ, ಫಲಿತಾಂಶ ಘೋಷಣೆ

ಎಲ್ಲ ಚುನಾವಣೆಗಳು ಈ ರೀತಿ ಸರಿಯಾದ ಹಂತಗಳನ್ನು ಪಾಲಿಸಿಕೊಂಡು ನಡೆಯುತ್ತವೆ. ಚುನಾವಣೆಯು ಪ್ರಜಾಪ್ರಭುತ್ವದ ಅವಿಭಾಜ್ಯ ಘಟಕಗಳಲ್ಲಿ ಒಂದಾಗಿದೆ. ಪ್ರಜಾಪ್ರಭುತ್ವವು ಇದೇ ರೀತಿಯ ಇತರ ಕೆಲವು ಅಂಶಗಳನ್ನು ಆಶ್ರಯಿಸಿ ನೆಲೆನಿಂತಿರುತ್ತದೆ. ಅವು ಯಾವುವೆಂದು ನೋಡೋಣ.

## ಪ್ರಜಾಪ್ರಭುತ್ವದ ಅಸ್ತಿತ್ವಕ್ಕೆ ಅಗತ್ಯವಾದ ಅಂಶಗಳು

### • ಕಾನೂನಿನ ಆಡಳಿತ

ಕಾನೂನಿನ ಮುಂದೆ ಎಲ್ಲರೂ ಸಮಾನರು. ಕಾನೂನನ್ನು ಪಾಲಿಸುವುದು ನಮ್ಮೆಲ್ಲರ ಕರ್ತವ್ಯ. ಯಾರೂ ಕಾನೂನಿಗೆ ಅತೀತರಲ್ಲ. ಬಹಳ ಸರಳವಾದ ಒಂದು ಉದಾಹರಣೆಯ ಮೂಲಕ ಕಾನೂನಿನ ಆಡಳಿತದ ಪ್ರಾಧಾನ್ಯವನ್ನು ನಮಗೆ ತಿಳಿಯಬಹುದು.

ರಸ್ತೆಯಲ್ಲಿ ಅಜಾಗರೂಕತೆಯಿಂದ ವಾಹನ ಚಲಾಯಿಸಿದರೆ ಏನಾಗಬಹುದು? ಅದರ ಪರಿಣಾಮಗಳನ್ನು ಚರ್ಚಿಸಿರಿ.

ವಾಹನ ಸಂಚಾರವನ್ನು ಸುಗಮ ಹಾಗೂ ಸುರಕ್ಷಿತವಾಗಿಸುವುದು ರಸ್ತೆ ನಿಯಮಗಳ ಉದ್ದೇಶವಾಗಿದೆ. ಈ ರೀತಿಯ ವಿವಿಧ ಕಾನೂನುಗಳನ್ನು ಗುರುತಿಸಿ ಅವುಗಳು ಜನಜೀವನವನ್ನು ಉತ್ತಮಗೊಳಿಸಲು ಹೇಗೆ ಸಹಕಾರಿಯಾಗುತ್ತವೆ ಎಂದು ಚರ್ಚಿಸಿ ತಿಳಿದುಕೊಳ್ಳಿರಿ.

### • ಹಕ್ಕುಗಳು

ವ್ಯಕ್ತಿ ಹಾಗೂ ದೇಶದ ಅಭಿವೃದ್ಧಿಗಾಗಿ ದೇಶವು ಒದಗಿಸಿರುವ ಸನ್ನಿವೇಶಗಳೇ ಹಕ್ಕುಗಳು. ವಿವಿಧ ಹಕ್ಕುಗಳು ಜನರಿಗೆ ಲಭಿಸಲು ಸರಕಾರ ಜಾರಿಗೊಳಿಸಿದ ಕಾನೂನುಗಳನ್ನು ಕೆಳಗಿನ ಪಟ್ಟಿಯ A ಭಾಗದಲ್ಲಿ ಕೊಡಲಾಗಿದೆ. ಈ ಕಾನೂನುಗಳಿಂದ ಸಂರಕ್ಷಿಸಲ್ಪಡುವ ಹಕ್ಕುಗಳನ್ನು ಕಂಡುಕೊಂಡು B ಭಾಗವನ್ನು ಪೂರ್ತಿಗೊಳಿಸಿರಿ.

| A | B |
|---|---|
| **ವಿವಿಧ ಕಾನೂನುಗಳು** | **ಸಂರಕ್ಷಿಸಲ್ಪಡುವ ಹಕ್ಕುಗಳು** |
| • ಶಿಕ್ಷಣ ಹಕ್ಕು ಕಾಯಿದೆ | • ............................................... |
| • ಮೋಟಾರ್ ವಾಹನ ಕಾನೂನು | • ............................................... |
| • ಮಾಹಿತಿ ಹಕ್ಕು ಕಾಯಿದೆ | • ............................................... |
| • ವಯೋಜನ ಪರಿಪಾಲನೆ ನಿಯಮ | • ............................................... |

ಮೇಲಿನ ಪಟ್ಟಿಯಲ್ಲಿ ಸೂಚಿಸಿರುವ ವಿವಿಧ ಕಾನೂನುಗಳ ಮೂಲಕ ಒಂದು ಪ್ರಜಾಪ್ರಭುತ್ವ ದೇಶದ ಜನತೆಯ ವಿವಿಧ ಹಕ್ಕುಗಳು ಸಂರಕ್ಷಿಸಲ್ಪಡುತ್ತವೆ ಎಂದು ತಿಳಿದಿರಲ್ಲವೇ.

ಈ ವಿಧದಲ್ಲಿರುವ ಹಕ್ಕುಗಳು ಲಭಿಸದಿದ್ದರೆ ಏನಾಗಬಹುದೆಂದೂ ಪ್ರಜಾಪ್ರಭುತ್ವಕ್ಕೆ ಅವು ಹೇಗೆ ತೊಂದರೆಯನ್ನುಂಟುಮಾಡಬಹುದೆಂದೂ ತರಗತಿಯಲ್ಲಿ ಚರ್ಚೆ ನಡೆಸಿರಿ.

## • ಸಾಮಾಜಿಕ - ಆರ್ಥಿಕ ನೀತಿ

ಪ್ರಜಾಪ್ರಭುತ್ವವು ಎಲ್ಲ ಜನರಿಗೂ ಸಹಭಾಗಿತ್ವವನ್ನು ನೀಡುವ ಆಡಳಿತ ವ್ಯವಸ್ಥೆಯಾಗಿದೆ. ಜನರೆಲ್ಲರೂ ಸಮಾನತೆಯಿಂದ ಪಾಲ್ಗೊಂಡಾಗಲೇ ಪ್ರಜಾಪ್ರಭುತ್ವವು ಅರ್ಥಪೂರ್ಣವಾಗುವುದು. ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಯನ್ನು ಕಡಿಮೆಗೊಳಿಸಿ ಎಲ್ಲರಿಗೂ ಸಮಾನ ಪರಿಗಣನೆ ನೀಡುವುದು ಸಾಮಾಜಿಕ - ಆರ್ಥಿಕ ನೀತಿ ಎಂಬ ಆಶಯದ ಮುಖ್ಯ ಉದ್ದೇಶವಾಗಿದೆ.



ಸಾಮಾಜಿಕ - ಆರ್ಥಿಕ ನೀತಿಗೆ ವಿರುದ್ಧವಾದ ಕೆಲವು ಆಶಯಗಳನ್ನು ಕೆಳಗೆ ನೀಡಲಾಗಿದೆ. ಅವು ಹೇಗೆ ಪ್ರಜಾಪ್ರಭುತ್ವಕ್ಕೆ ದೋಷಕರವಾಗಬಹುದು ಎಂದು ವಿಶ್ಲೇಷಿಸಿರಿ.

- ಗುಲಾಮಗಿರಿ
- ಲಿಂಗ ಅಸಮಾನತೆ
- ನಿರುದ್ಯೋಗ
- ಬಡತನ

## • ಮಾಧ್ಯಮಗಳು



ಕೊಟ್ಟಿರುವ ಚಿತ್ರವನ್ನು ಗಮನಿಸಿದರಲ್ಲವೆ. ಇದರಿಂದ ಮಾಧ್ಯಮಗಳು ಅಂದರೆ ಏನು ಎಂಬುದನ್ನು ಕಂಡುಕೊಳ್ಳಿರಿ. ನಿಮಗೆ ತಿಳಿದಿರುವ ವಿವಿಧ ಪತ್ರಿಕೆಗಳು ಹಾಗೂ ಟಿ.ವಿ. ಚಾನಲ್‌ಗಳ ಪಟ್ಟಿಯನ್ನು ತಯಾರಿಸಿರಿ. ಮಾಧ್ಯಮಗಳು ಸಮಾಜದಲ್ಲಿ ನಡೆಯುವ ಘಟನೆಗಳನ್ನು ಜನರಿಗೆ ತಲುಪಿಸುವ ಒಂದು ಪ್ರಧಾನ ಉಪಾದಿಯಾಗಿದೆ. ಸ್ವತಂತ್ರ ಹಾಗೂ ನಿಷ್ಪಕ್ಷಪಾತವಾದ ಮಾಧ್ಯಮಗಳು ಪ್ರಜಾಪ್ರಭುತ್ವದ ಅಡಿಪಾಯವಾಗಿವೆ. ಜನರ ಅಭಿಪ್ರಾಯಗಳನ್ನು ಪರಸ್ಪರ ತಿಳಿಯುವುದರಲ್ಲಿ ಹಾಗೂ ಅವರ ಅವಶ್ಯಕತೆಗಳನ್ನು ಸರಕಾರದ ಗಮನಕ್ಕೆ ತರುವುದರಲ್ಲಿ ಮಾಧ್ಯಮಗಳು ಪ್ರಧಾನ ಪಾತ್ರ ವಹಿಸುತ್ತವೆ. ಮಾಧ್ಯಮಗಳ ಮೂಲಕ ಸರಕಾರದ ತೀರ್ಮಾನಗಳು ಜನರಿಗೆ ತಲುಪುತ್ತವೆ. ಪತ್ರಿಕೆಗಳಿಂದ ಈ ರೀತಿಯ ವಾರ್ತೆಗಳನ್ನು ಕಂಡುಕೊಂಡು ತರಗತಿಯಲ್ಲಿ ಮಂಡಿಸುವಿರಲ್ಲವೇ. ಮಾಧ್ಯಮಗಳು ಇಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ಏನು ಸಂಭವಿಸಬಹುದು ಎಂದು ಊಹಿಸಿ ಟಿಪ್ಪಣಿ ತಯಾರಿಸಿರಿ.

- **ವಿರೋಧ ಪಕ್ಷ**

ಪ್ರಜಾಪ್ರಭುತ್ವದಲ್ಲಿ ಚುನಾವಣೆಯ ಪ್ರಾಧಾನ್ಯದ ಕುರಿತು ಕಲಿತೆವಲ್ಲವೆ. ಚುನಾವಣೆಯಿಂದಾಗಿ ಆಡಳಿತ ಪಕ್ಷವೂ ಅದರೊಂದಿಗೆ ವಿರೋಧ ಪಕ್ಷವೂ ಉಂಟಾಗುತ್ತದೆ. ವಿರೋಧ ಪಕ್ಷವು ಸರಕಾರದ ಚಟುವಟಿಕೆಗಳ ಕುಂದುಕೊರತೆಗಳನ್ನು ಬೊಟ್ಟುಮಾಡಿ ಉತ್ತಮ ರೀತಿಯ ಆಡಳಿತ ನಡೆಸಲು ಸರಕಾರವನ್ನು ಪ್ರೇರೇಪಿಸುತ್ತದೆ. ವಿರೋಧ ಪಕ್ಷದ ಕಾರ್ಯಚಟುವಟಿಕೆಗಳ ಕುರಿತಾದ ಪತ್ರಿಕಾ ವಾರ್ತೆಗಳನ್ನು ಸಂಗ್ರಹಿಸುವಿರಲ್ಲವೆ. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷದ ಪಾತ್ರದ ಕುರಿತು ಒಂದು ಚರ್ಚೆಯನ್ನು ನಡೆಸುವಿರಲ್ಲವೆ.

ಹೀಗೆ ಚುನಾವಣೆ, ಕಾನೂನು ಆಡಳಿತ, ಹಕ್ಕುಗಳು, ಸಾಮಾಜಿಕ – ಆರ್ಥಿಕ ನೀತಿ, ಮಾಧ್ಯಮಗಳು, ವಿರೋಧ ಪಕ್ಷ ಮುಂತಾದ ಅಂಶಗಳು ಪ್ರಜಾಪ್ರಭುತ್ವವನ್ನು ಅಸ್ತಿತ್ವದಲ್ಲಿರಿಸುತ್ತವೆ.

## ಪ್ರಜಾಪ್ರಭುತ್ವ ಒಂದು ಜೀವನ ರೀತಿ

ಪ್ರಜಾಪ್ರಭುತ್ವವು ಒಂದು ಜೀವನ ರೀತಿ ಎಂಬ ನೆಲೆಯಲ್ಲಿ ಮಾನವೀಯ ಮೌಲ್ಯಗಳಿಗೂ ವ್ಯಕ್ತಿ ಸ್ವಾತಂತ್ರ್ಯಕ್ಕೂ ಅಂಗೀಕಾರ ನೀಡುತ್ತದೆ. ಇತರರ ಅಭಿಪ್ರಾಯಗಳಿಗೆ ಮನ್ನಣೆ ನೀಡುವುದು ಪ್ರಜಾಪ್ರಭುತ್ವ ಜೀವನ ರೀತಿಯ ಭಾಗವಾಗಿದೆ. ಅಭಿಪ್ರಾಯಗಳನ್ನು ಒಪ್ಪಿಕೊಳ್ಳಲು ಅಥವಾ ನಿರಾಕರಿಸಲು ಜನರಿಗೆ ಹಕ್ಕುಗಳಿವೆ. ಒಟ್ಟಾಗಿ ತೀರ್ಮಾನಗಳನ್ನು ಕೈಗೊಳ್ಳಲು ಸಾಧ್ಯವಾಗುವಾಗ ಪ್ರಜಾಪ್ರಭುತ್ವವು ಅರ್ಥಪೂರ್ಣವಾಗುತ್ತದೆ. ಮನೆ, ಶಾಲೆ, ಸಮಾಜ ಮೊದಲಾದ ಜೀವನದ ಎಲ್ಲ ವಲಯಗಳಲ್ಲೂ ಪ್ರಜಾಪ್ರಭುತ್ವವನ್ನು ಒಂದು ಜೀವನ ರೀತಿ ಎಂಬ ನೆಲೆಯಲ್ಲಿ ಅಳವಡಿಸಿಕೊಂಡು ಕಾರ್ಯಾಚರಿಸಲು ಸಾಧ್ಯವಾಗಬೇಕು.

ನಿತ್ಯಜೀವನದಲ್ಲಿ ಪ್ರಜಾಪ್ರಭುತ್ವ ರೀತಿಯ ಹಲವು ಅಭ್ಯಾಸಗಳನ್ನು ನಾವು ರೂಢಿಸಿಕೊಳ್ಳುತ್ತೇವೆ. ಅವುಗಳು ಯಾವುವು?

- ಇತರರ ಅಭಿಪ್ರಾಯಗಳನ್ನು ಅಂಗೀಕರಿಸುತ್ತೇವೆ.
- ಸರದಿಗಾಗಿ ಕಾದು ನಿಲ್ಲುತ್ತೇವೆ.
- ಇತರರ ಸ್ವಾತಂತ್ರ್ಯವನ್ನು ಪರಿಗಣಿಸುತ್ತೇವೆ.



ನಿಮ್ಮ ಗೆಳೆಯ/ಗೆಳತಿ ಪ್ರಜಾಪ್ರಭುತ್ವವಾದಿಯೇ? ಚೆಕ್‌ಲಿಸ್ಟ್‌ನ್ನು ಪರಿಶೀಲಿಸಿರಿ. ಸೂಕ್ತ ಭಾಗದಲ್ಲಿ ✓ ಚಿಹ್ನೆಯನ್ನು ನೀಡಿರಿ.


| ಸಂದರ್ಭ | ಹೌದು | ಇಲ್ಲ |
|---|---|---|
| ರಸ್ತೆ ನಿಯಮಗಳನ್ನು ಪಾಲಿಸುತ್ತಾರೆ. | | |
| ಸಾಲಾಗಿ ನಿಂತು ಶಾಲಾಬಸ್ಸು ಹತ್ತಲು ಪ್ರಯತ್ನಿಸುತ್ತಾರೆ. | | |
| ಲೈಬ್ರೆರಿ ಪುಸ್ತಕಗಳನ್ನು ಸೂಕ್ತ ಸಮಯದಲ್ಲಿ ಹಿಂತಿರುಗಿಸುತ್ತಾರೆ. | | |
| ಕೆಲವು ಅಭಿಪ್ರಾಯಗಳು ಸರಿಯಲ್ಲವೆಂದು ತೋರಿದರೆ ಅದನ್ನು ಒಪ್ಪಿಕೊಳ್ಳುವುದಿಲ್ಲ. | | |
| ಶಾಲಾನಿಯಮಗಳಂತೆ ಸಮವಸ್ತ್ರವನ್ನು ಧರಿಸುತ್ತಾರೆ. | | |
| ಮಾಲಿನ್ಯಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಹಾಕುವುದಿಲ್ಲ. | | |

ಪಟ್ಟಿಯಲ್ಲಿ ಹೆಚ್ಚಿನ ಹೇಳಿಕೆಗಳನ್ನು ಸೇರಿಸುವುರಲ್ಲವೇ.

'ಹೌದು' ಎಂಬ ಭಾಗದಲ್ಲಿರುವ ✓ ಚಿಹ್ನೆಗಳು ಒಬ್ಬರು ಪ್ರಜಾಪ್ರಭುತ್ವವಾದಿಯಾಗಿರುವರು ಎಂದು ಸೂಚಿಸುತ್ತದೆ. 'ಹೌದು' ಎಂಬ ಭಾಗದಲ್ಲಿನ ಗುರುತಿಸುವಿಕೆಯು ಹೆಚ್ಚಾದಂತೆ ಅವರು ಪ್ರಜಾಪ್ರಭುತ್ವ ಜೀವನ ರೀತಿಗೆ ಹೆಚ್ಚು ಹೊಂದಿಕೊಂಡಿದ್ದಾರೆ ಎಂದು ಹೇಳಬಹುದು.

ಸಮಾಜವು ಉತ್ತಮ ರೀತಿಯಲ್ಲಿ ಮುಂದುವರಿಯಲು ಪ್ರತಿಯೊಬ್ಬ ವ್ಯಕ್ತಿಯೂ ಇತರರ ಪ್ರಜಾಪ್ರಭುತ್ವ ಪರವಾದ ಚಟುವಟಿಕೆಗಳನ್ನು ಗೌರವಿಸಬೇಕು. ಒಬ್ಬರ ಪ್ರಜಾಪ್ರಭುತ್ವ ಪರವಾದ ಚಟುವಟಿಕೆಗಳಿಗೆ ತಡೆಯೊಡ್ಡಲು ಇತರರಿಗೆ ಹಕ್ಕಿಲ್ಲ. ಪ್ರಜಾಪ್ರಭುತ್ವವೆಂಬುದು ಕಾನೂನು ವ್ಯವಸ್ಥೆಯಲ್ಲಿ ಆಧಾರಿತವಾಗಿದೆ. ಕಾನೂನು ಉಲ್ಲಂಘಿಸುವುದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ.

ಶಬ್ದಮಾಲಿನ್ಯವನ್ನು ಸೂಚಿಸುವ ಚಿತ್ರವನ್ನು ನೋಡಿರಿ.



ಮೇಲಿನ ಚಿತ್ರದಲ್ಲಿ ಸೂಚಿಸಿದಂತಹ ಪ್ರಜಾಪ್ರಭುತ್ವ ವಿರೋಧಿ ಚಟುವಟಿಕೆಗಳು ನಿಮ್ಮ ಗಮನಕ್ಕೆ ಬಂದಿವೆಯೆ? ಅವು ಪ್ರಜಾಪ್ರಭುತ್ವಕ್ಕೆ ಹೇಗೆ ತೊಂದರೆಯನ್ನುಂಟುಮಾಡುತ್ತವೆ ಎಂದು ಚರ್ಚಿಸಿರಿ. ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವ ಆಡಳಿತ ವ್ಯವಸ್ಥೆಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯು ಅತ್ಯಂತ ಶ್ರೇಷ್ಠವಾದುದಾಗಿದೆ. ಈ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಪೌರನಿಗೂ ಆಡಳಿತದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಲು ನಾವು ಜಾಗೃತಿ ಮೂಡಿಸಬೇಕು.

## ಕ್ರೋಢೀಕರಣ

ಜನರಿಗಾಗಿ ಜನರಿಂದ ನಡೆಸಲ್ಪಡುವ ಜನರ ಆಡಳಿತವೇ ಪ್ರಜಾಪ್ರಭುತ್ವ.

- ಪ್ರಜಾಪ್ರಭುತ್ವ ಎಂಬುದು ಕೇವಲ ಒಂದು ಆಡಳಿತ ವಿಧಾನ ಮಾತ್ರವಲ್ಲ, ಒಂದು ಜೀವನ
- ರೀತಿಯೂ ಆಗಿದೆ.

ಚುನಾವಣೆಗಳು, ಕಾನೂನಿನ ಆಡಳಿತ, ಪೌರಹಕ್ಕುಗಳು, ಸಾಮಾಜಿಕ-ಆರ್ಥಿಕ ನೀತಿ,

- ಮಾಧ್ಯಮಗಳು, ವಿರೋಧ ಪಕ್ಷ ಮೊದಲಾದ ಅಂಶಗಳು ಪ್ರಜಾಪ್ರಭುತ್ವವನ್ನು ಅಸ್ತಿತ್ವದಲ್ಲಿರಿಸುತ್ತವೆ.

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ವಿವಿಧ ನಿರ್ವಚನಗಳನ್ನು ಹೋಲಿಸಿ ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದ ಆಶಯಗಳನ್ನು ರೂಪಿಸುವರು.
- ಚುನಾವಣೆಯ ಹಂತಗಳನ್ನು ವಿವರಿಸಲು ಸಾಧ್ಯವಾಗುವುದು.
- ಪ್ರಜಾಪ್ರಭುತ್ವವು ಅಸ್ತಿತ್ವದಲ್ಲಿರಲು ಅಗತ್ಯವಾದ ಪ್ರಾಥಮಿಕ ಅಂಶಗಳನ್ನು ಗುರುತಿಸುವರು.
- ಪ್ರಜಾಪ್ರಭುತ್ವವು ಆಡಳಿತ ವಿಧಾನ ಎಂಬಂತೆ ಒಂದು ಜೀವನ ರೀತಿಯೂ ಆಗಿದೆ. ಇದು ಸಮಾಜದ ಒಳಿತಿಗೆ ಅಗತ್ಯವೆಂದು ತಿಳಿಯುವರು.

## ಮೌಲ್ಯನಿರ್ಣಯ ಮಾಡುವ

- ಪ್ರಜಾಪ್ರಭುತ್ವದ ಮೂರು ವಿಶೇಷತೆಗಳನ್ನು ಬರೆಯಿರಿ.
- ಪ್ರಜಾಪ್ರಭುತ್ವದ ಸುಗಮವಾದ ಮುಂದುವರಿಕೆಗೆ ಸೂಕ್ತವಾದ ಕೆಲವು ಅಂಶಗಳನ್ನು ಕೆಳಗೆ ಕೊಡಲಾಗಿದೆ.

| | | | |
|---|---|---|---|
| A | ಚುನಾವಣೆ | B | ನ್ಯಾಯಾಲಯ |
| C | ಪೌರ ಹಕ್ಕುಗಳು | D | ಸಾಮಾಜಿಕ ಹಾಗೂ ಆರ್ಥಿಕ ನೀತಿ |
| E | ಮಾಧ್ಯಮಗಳು | F | ವಿರೋಧ ಪಕ್ಷ |

ಕೆಳಗೆ ನೀಡಲಾದ ಹೇಳಿಕೆಗಳು ಮೇಲಿನ ಯಾವ ಘಟಕದೊಂದಿಗೆ ಹೊಂದಿಕೊಂಡಿವೆ ಎಂದು ಅವುಗಳ ಅಕ್ಷರಗಳನ್ನು ಬರೆದು ಸೂಚಿಸಿರಿ.

1. ಸಾರಿಗೆ ಸೌಕರ್ಯಕ್ಕಾಗಿ ನದಿಗೆ ಸೇತುವೆ ನಿರ್ಮಿಸಲಾಯಿತು. ☐
2. ಒಬ್ಬ ವ್ಯಕ್ತಿಗೆ ಅರ್ಹತೆ ಇದ್ದಲ್ಲಿ ಯಾವುದೇ ಹುದ್ದೆಯನ್ನು ನಿರ್ವಹಿಸಲು ಅವಕಾಶವಿದೆ. ☐
3. ಅಪರಾಧಿಗೆ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿತು. ☐
4. ಸಾಮಾಜಿಕ ಕಾರ್ಯಕರ್ತನ ಭ್ರಷ್ಟಾಚಾರವನ್ನು ಎಲ್ಲ ಟಿ.ವಿ. ಚಾನಲುಗಳು ಪ್ರಧಾನ ವಾರ್ತೆಯಾಗಿ ಪ್ರಸಾರಮಾಡಿದವು. ☐
5. ಐದು ವರ್ಷಕ್ಕೊಮ್ಮೆ ಜನರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ. ☐

- ಪ್ರಜಾಪ್ರಭುತ್ವವನ್ನು ಕಾರ್ಯಗತಗೊಳಿಸುವ ಒಂದು ಜೀವನ ಸಂದರ್ಭವನ್ನು ಬರೆಯಿರಿ.

## ಮುಂದುವರಿದ ಚಟುವಟಿಕೆಗಳು

- ನಿಮ್ಮ ತರಗತಿಯ ನಾಯಕನ ಚುನಾವಣೆಗೆ ಸಂಬಂಧಿಸಿದ ಒಂದು ವರದಿಯನ್ನು ತಯಾರಿಸಿರಿ. (ನಾಮಪತ್ರ, ಚುನಾವಣಾ ರೀತಿ, ಅಭ್ಯರ್ಥಿಗೆ ಲಭಿಸಿದ ಮತಗಳ ಸಂಖ್ಯೆ ಎಂಬಿವುಗಳನ್ನು ಸೇರಿಸಬಹುದಾಗಿದೆ)
- ಚುನಾವಣೆ, ಆಡಳಿತ ಬದಲಾವಣೆ ಎಂಬಿವುಗಳಿಗೆ ಸಂಬಂಧಿಸಿದ ಪತ್ರಿಕಾ ವಾರ್ತೆಗಳನ್ನು ಸಂಗ್ರಹಿಸಿರಿ.
- ಪ್ರಜಾಪ್ರಭುತ್ವದ ಕುರಿತು ಮಹಾನ್ ವ್ಯಕ್ತಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ ಭಿತ್ತಿಪತ್ರಿಕೆ ತಯಾರಿಸಿರಿ.
- ನಿಮ್ಮ ವಾರ್ಡು ಮೆಂಬರ್/ಕೌನ್ಸಿಲರ್ ಅವರೊಂದಿಗೆ ಸಂದರ್ಶನ ನಡೆಸಲು ಅಗತ್ಯವಾದ ಪ್ರಶ್ನಾವಳಿಯನ್ನು ತಯಾರಿಸಿರಿ. (ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ)
- ಪ್ರಜಾಪ್ರಭುತ್ವದಲ್ಲಿ ಚುನಾವಣೆಯ ಪ್ರಾಧಾನ್ಯದ ಕುರಿತು ಒಂದು ಟಿಪ್ಪಣಿ ತಯಾರಿಸಿರಿ.
- ಚುನಾವಣೆಗೆ ಸಂಬಂಧಿಸಿದ ವಾರ್ತೆಗಳನ್ನು ಮತ್ತು ಚಿತ್ರಗಳನ್ನು ಸಂಗ್ರಹಿಸಿ ಕೊಲಾಷ್ ತಯಾರಿಸಿರಿ.



# 10

# ಕೇರಳ ತೀರದಲ್ಲಿ

ಕೇರಳವು ಪ್ರಕೃತಿ ಸೌಂದರ್ಯದಿಂದ ಅನುಗ್ರಹಿಸಲ್ಪಟ್ಟ ನಾಡಾಗಿದೆ. ನದಿಗಳು, ಬೆಟ್ಟಗಳು, ಸರೋವರಗಳು, ಸಮುದ್ರಕಿನಾರೆಯು, ವೈವಿಧ್ಯದಿಂದ ಕೂಡಿದ ಸಸ್ಯ ಜೀವ ಜಾಲಗಳು, ಹಿತಕರವಾದ ಹವಾಮಾನ ಇತ್ಯಾದಿಗಳು ಕೇರಳದ ವಿಶೇಷತೆಗಳಾಗಿವೆ.



ಕಾಸರಗೋಡಿನ ಪುಂಡೂರುಕೊಚ್ಚಿಯ ಕುಮಾರಿ ಗೀತಾಲಕ್ಷ್ಮಿ ಕೆ. ಯವರ 'ಹಸಿರು' ಎಂಬ ಕವನ ಸಂಕಲನದಲ್ಲಿ ಕೇರಳವನ್ನು ವರ್ಣಿಸಿರುವುದನ್ನು ನೋಡಿರಿ.


ಕೇರ ವೃಕ್ಷಗಳು ತುಂಬಿದ ನಾಡು
ಅದುವೇ ನಮ್ಮಯ ಕೇರಳ ನಾಡು ||
ಕಂಗು ಬಾಳೆಗಳು ಬೆಳೆಯುವ ನಾಡು
ಸುಂದರ ನಮ್ಮಯ ಕೇರಳ ನಾಡು ||೧||

ಭತ್ತದ ಗದ್ದೆಗಳಿರುವಾ ನಾಡು
ತೆನೆಗಳು ಬಾಗಿವೆ ನೀ ನೋಡು ||
ಎತ್ತ ನೋಡಿದರು ಹಸಿರು ಪೈರುಗಳು
ಇಹುದು ಇಲ್ಲಿಯು ಮಲೆನಾಡು ||೨||

ಸಾಗರ ತೀರದಿ ನೆಲೆಸಿಹ ನಾಡು
ಬೆಸ್ತ ಜನರಿಗಿದು ನೆಲೆಬೀಡು ||
ಕಥಕ್ಕಳಿ ಜಲೋತ್ಸವಗಳಿರುವಾ ನಾಡು
ಕಲೆಗಳ ಆಗರ ಇಲ್ಲಿದೆ ನೋಡು ||೩||

ಇಷ್ಟು ಮನೋಹರವಾದ ನಮ್ಮ ರಾಜ್ಯದ ಕುರಿತು ಇನ್ನಷ್ಟು ತಿಳಿಯಬೇಡವೇ?
ಕೇರಳ ರಾಜ್ಯವು ಭಾರತದ ದಕ್ಷಿಣ ತುದಿಯಲ್ಲಿದ್ದು, ಇದರ ಪೂರ್ವದಲ್ಲಿ ಪಶ್ಚಿಮಘಟ್ಟ ಹಾಗೂ ಪಶ್ಚಿಮದಲ್ಲಿ ಅರಬಿ ಸಮುದ್ರವಿದೆ.

ಕೆಳಗೆ ಕೊಟ್ಟಿರುವ ಭೂಪಟವನ್ನು ನೋಡಿರಿ. (ಚಿತ್ರ 10.1)




ಚಿತ್ರ 10.1

- ಕೇರಳದ ನೆರೆಯ ರಾಜ್ಯಗಳು ಯಾವುವು?
- ಕೇರಳದಲ್ಲಿ ಎಷ್ಟು ಜಿಲ್ಲೆಗಳಿವೆ?
- ಅತಿ ಚಿಕ್ಕ ಜಿಲ್ಲೆ ಯಾವುದು?
- ಸಮುದ್ರ ಕಿನಾರೆ ಇಲ್ಲದ ಜಿಲ್ಲೆಗಳು ಯಾವುವು?

ಈ ರೀತಿಯ ಇನ್ನೂ ಹೆಚ್ಚಿನ ಪ್ರಶ್ನೆಗಳನ್ನು ಮೇಲಿನ ಭೂಪಟದ ಆಧಾರದಲ್ಲಿ ತಯಾರಿಸಿರಿ. ಪ್ರತಿಯೊಂದು ಪ್ರಶ್ನೆಗೂ ನೀವು ಕಂಡುಕೊಳ್ಳುವ ಉತ್ತರವನ್ನು ನೋಟ್ ಪುಸ್ತಕದಲ್ಲಿ ಬರೆಯಿರಿ. ತಯಾರಿಸಿದ ಪ್ರಶ್ನೆಗಳನ್ನು ಉಪಯೋಗಿಸಿ ತರಗತಿಯಲ್ಲಿ ರಸಪ್ರಶ್ನೆ ಸ್ಪರ್ಧೆ ನಡೆಸಿರಿ.


## ಭೂಪ್ರಕೃತಿ

ನಮ್ಮ ಪುಟ್ಟ ಕೇರಳವು ಪಶ್ಚಿಮದಲ್ಲಿ ಅರಬಿ ಸಮುದ್ರಕ್ಕೆ ತಾಗಿಕೊಂಡಿರುವ ಹೊಗೆ ತುಂಬಿದ ಪ್ರದೇಶದಿಂದಾರಂಭಿಸಿ ಬೆಟ್ಟಗಳನ್ನೂ ಕಣಿವೆಗಳನ್ನೂ ದಾಟಿ ಪೂರ್ವದ ಮೇರೆಯನ್ನು ತಲುಪುವಾಗ ರಭಸದಿಂದ ಹರಿಯುವ ತೊರೆಗಳು ಹಾಗೂ ಎತ್ತರದ ಪರ್ವತಗಳಿಂದೊಡಗೂಡಿ ವೈವಿಧ್ಯದಿಂದಿರುವ ಭೂಪ್ರಕೃತಿಯಾಗಿದೆ.

ಸಮುದ್ರಮಟ್ಟದಿಂದಿರುವ ಎತ್ತರದ ಆಧಾರದಲ್ಲಿ ಕೇರಳದ ಭೂಪ್ರಕೃತಿಯನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು.

ಭೂಪಟ(ಚಿತ್ರ10.2)ವನ್ನು ನೋಡಿ ಕೇರಳದ ಪ್ರಾಕೃತಿಕ ವಿಭಾಗಗಳು ಯಾವುವು ಎಂದು ಬರೆಯಿರಿ.

- ಮಲೆನಾಡು
- 
- 



ಕೇರಳ
ಪ್ರಾಕೃತಿಕ
ಕರ್ನಾಟಕ
ತಮಿಳುನಾಡು
75°0'0"E
76°0'0"E
77°0'0"E
78°0'0"E
13°0'0"N
12°0'0"N
11°0'0"N
10°0'0"N
9°0'0"N
N
W
E
S
0 25 50 100
ಸೂಚಿಕೆ
ಕರಾವಳಿ <7.5 m
ನಡುನಾಡು 7.5-75 m
ಮಲೆನಾಡು >75 m



ಚಿತ್ರ 10. 2



ಮಲೆನಾಡುಗಳು ಸಮುದ್ರಮಟ್ಟದಿಂದ ಸುಮಾರು 75 ಮೀಟರ್‌ಗಿಂತಲೂ ಹೆಚ್ಚು ಎತ್ತರವಿರುವ ಪ್ರದೇಶಗಳಾಗಿವೆ. ನಮ್ಮ ರಾಜ್ಯದ ನದಿಗಳೆಲ್ಲವೂ ಎತ್ತರದ ಬೆಟ್ಟಗಳೂ ಪರ್ವತಗಳೂ ಇರುವ ಈ ಪ್ರಾಕೃತಿಕ ವಿಭಾಗದಿಂದ ಉದ್ಭವಿಸುತ್ತವೆ. ಇದರ ಹೆಚ್ಚಿನ ಪ್ರದೇಶಗಳೂ ಅರಣ್ಯಗಳಾಗಿವೆ.

## ಸಹ್ಯಾದ್ರಿಯ ಮಡಿಲಲ್ಲಿ

ಕೇರಳದ ಮಲೆನಾಡು ಪ್ರದೇಶವು ದಕ್ಷಿಣದ ಕನ್ಯಾಕುಮಾರಿಯಿಂದ ಉತ್ತರದ ಮಹಾರಾಷ್ಟ್ರದವರೆಗೆ ವ್ಯಾಪಿಸಿರುವ ಪಶ್ಚಿಮಘಟ್ಟ ಪರ್ವತ ಸಾಲುಗಳ ಭಾಗವಾಗಿದೆ. ಚಿರತೆ, ಹುಲಿ, ಬರೆ ಆಡು, ಸಿಂಹಬಾಲದ ಮಂಗ ಇತ್ಯಾದಿಗಳೂ ಉಗ್ರ ವಿಷವುಳ್ಳ ಕಾಳಿಂಗ ಸರ್ಪವೇ ಮೊದಲಾದ ಹಾವುಗಳೂ ಹಲವು ವಿಧದ ಪಕ್ಷಿಗಳೂ ಬಣ್ಣದ ಚಿಟ್ಟೆಗಳೂ ಮೊದಲಾದ ಅಪೂರ್ವ ಜೀವಿಗಳು ಪಶ್ಚಿಮ ಘಟ್ಟದಲ್ಲಿವೆ.



ಕೊಂಬುಕೊಕ್ಕಿನ ಪಕ್ಷಿ



ಬರೆ ಆಡು

ಪಶ್ಚಿಮಘಟ್ಟ ವಲಯವು ಬೀಟಿ, ದೇವದಾರು, ಶ್ರೀಗಂಧ, ರಕ್ತಚಂದನ ಮೊದಲಾದ ಮರಗಳು ಹಾಗೂ ಹಲವು ವಿಧದ ಓರ್ಕಿಡ್‌ಗಳಿಂದ ಕೂಡಿದೆ.

ಈ ಪ್ರದೇಶಕ್ಕೆ ಸಹ್ಯ ಪರ್ವತ ಸಾಲು ಎಂಬ ಹೆಸರಿದೆ.

ಪಶ್ಚಿಮಘಟ್ಟ ಮತ್ತು ಅಲ್ಲಿನ ಜೀವಜಾಲಗಳ ಚಿತ್ರಗಳನ್ನು ಇಂಟರ್ನೆಟ್‌ನಿಂದ ಸಂಗ್ರಹಿಸಿ ಸಮಾಜವಿಜ್ಞಾನ ಪ್ರಯೋಗಾಲಯದ ಕಂಪ್ಯೂಟರ್‌ನಲ್ಲಿ ಡಿಜಿಟಲ್ ಆಲ್ಬಂ ತಯಾರಿಸಿರಿ.

### ನಿಶ್ಶಬ್ದತೆಯ ತಪ್ಪಲಲ್ಲಿ



ಸೈಲಂಟ್‌ವ್ಯಾಲಿಯು ಪಾಲಕ್ಕಾಡ್ ಜಿಲ್ಲೆಯ ಮಣ್ಣಾರ್ಕಾಡ್ ತಾಲೂಕಿನಲ್ಲಿರುವ ಪಶ್ಚಿಮ ಘಟ್ಟದ ವನಪ್ರದೇಶವಾಗಿದೆ. ಜೀರುಂಡೆಗಳು ಅಪೂರ್ವವಾದುದರಿಂದ ಈ ಪ್ರದೇಶವು ಸೈಲಂಟ್ ವ್ಯಾಲಿ (ಮೌನ ಕಣಿವೆ) ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಈ ಕಾಡು ಪ್ರದೇಶವು ವಂಶ ನಾಶ ಭೀತಿ ಎದುರಿಸುತ್ತಿರುವ ಸಿಂಹಬಾಲದ ಮಂಗಗಳೂ ಅಲ್ಲದೆ ಅನೇಕ ಸಸ್ಯ ಜೀವ ಜಾಲಗಳ ಆವಾಸ ಕೇಂದ್ರವೂ ಆಗಿದೆ.

## ನಡುನಾಡು

ನಡುನಾಡು ಎಂಬುದು ಸಮುದ್ರ ಮಟ್ಟದಿಂದ ಸುಮಾರು 7.5 ಮೀಟರ್‌ನಿಂದ 75ಮೀಟರ್‌ವರೆಗಿನ ಎತ್ತರವಿರುವ ಭೂಪ್ರದೇಶಗಳಾಗಿವೆ. ನಡುನಾಡಿನಲ್ಲಿ ಸಣ್ಣ ಬೆಟ್ಟಗಳು, ತಪ್ಪಲುಗಳು, ನದೀದಡಗಳು ಒಳಗೊಂಡಿದೆ.



ನಡುನಾಡಿನ ಪೂರ್ವ ಹಾಗೂ ಪಶ್ಚಿಮ ದಿಕ್ಕಿನ ಗಡಿಗಳಾಗಿರುವ ಪ್ರಾಕೃತಿಕ ವಿಭಾಗಗಳು ಯಾವುವು ಎಂದು ಭೂಪಟದಿಂದ ಕಂಡುಕೊಳ್ಳಿರಿ.

## ಕರಾವಳಿ

ಕರಾವಳಿಯು ಸಮುದ್ರಮಟ್ಟದಿಂದ ಸುಮಾರು 7.5ಮೀಟರ್‌ವರೆಗಿನ ಎತ್ತರದ ಪ್ರದೇಶವಾಗಿದೆ. ಇದು ಸಾಮಾನ್ಯವಾಗಿ ಹೊಯ್ಗೆಯಿಂದ ತುಂಬಿರುವ ಭೂಪ್ರದೇಶವಾಗಿದೆ.





## ಹವಾಮಾನ

ಹಿತಕರವಾದ ಹವಾಮಾನವು ಕೇರಳದಲ್ಲಿ ಅನುಭವಕ್ಕೆ ಬರುತ್ತದೆ. ಸಮುದ್ರ ಸಾಮೀಪ್ಯದಿಂದಾಗಿ ಕೇರಳದಲ್ಲಿ ಅತ್ಯಧಿಕ ಉಷ್ಣವೋ ಶೈತ್ಯವೋ ಅನುಭವಕ್ಕೆ ಬರುವುದಿಲ್ಲ.

ಕೇರಳಕ್ಕೆ ಅತಿ ಹೆಚ್ಚು ಮಳೆ ಲಭಿಸುವುದು ನೈಋತ್ಯ ಮನ್ಸೂನ್ ಕಾಲದಲ್ಲಾಗಿದೆ. ಜೂನ್ ತಿಂಗಳಿನಲ್ಲಿ ಆರಂಭವಾಗುವ ಈ ಮಳೆಗಾಲವನ್ನು ಇಡವಪ್ಪಾದಿ (ಮುಂಗಾರು ಮಳೆ),ಕಾಲವರ್ಷ ಎಂಬೀ ಹೆಸರುಗಳಿಂದ ಕರೆಯುತ್ತಾರೆ. ಈಶಾನ್ಯ ಮನ್ಸೂನ್ ಕಾಲವನ್ನು ತುಲಾ ವರ್ಷ (ಹಿಂಗಾರು ಮಳೆ) ಎಂದು ಕರೆಯುವರು.



ಸಂಜೆಯ ಹೊತ್ತಿನಲ್ಲಿ ಗುಡುಗು ಸಿಡಿಲಿನಿಂದೊಡಗೂಡಿದ ಮಳೆಯು ತುಲಾ ವರ್ಷದ ವಿಶೇಷತೆಯಾಗಿದೆ.



ಕೇರಳದಲ್ಲಿ ಯಾವೆಲ್ಲಾ ತಿಂಗಳುಗಳಲ್ಲಿ ತುಲಾ ವರ್ಷವು (ಹಿಂಗಾರು ಮಳೆ) ಅನುಭವಕ್ಕೆ ಬರುತ್ತದೆ?

ಡಿಸೆಂಬರ್ ತಿಂಗಳಿನಿಂದ ಕೇರಳದಲ್ಲಿ ಮಿತವಾದ ಶೈತ್ಯವು ಅನುಭವಕ್ಕೆ ಬರುತ್ತದೆ.

ಫೆಬ್ರವರಿ ತಿಂಗಳ ಮಧ್ಯದಿಂದ ಬೇಸಿಗೆ ಕಾಲವು ಆರಂಭವಾಗುತ್ತದೆ. ಬೇಸಿಗೆ ಕಾಲದಲ್ಲಿ ಯಾವ ಯಾವ ವಿಶೇಷತೆಗಳು ನಮ್ಮ ಅನುಭವಕ್ಕೆ ಬರುತ್ತವೆ?

- ನದಿಗಳಲ್ಲಿ ನೀರಿನ ಹರಿಯುವಿಕೆ ಕಡಿಮೆಯಾಗುತ್ತದೆ.
- 



## ನದಿಗಳು

ಪಶ್ಚಿಮಘಟ್ಟದಲ್ಲಿ ಹುಟ್ಟಿ ಕೇರಳದ ಮೂಲಕ ಹರಿಯುವ 44 ನದಿಗಳಿವೆ. ಇವುಗಳಲ್ಲಿ ಕಬನಿ, ಭವಾನಿ ಮತ್ತು ಪಾಂಬಾರ್ ಪೂರ್ವ ದಿಕ್ಕಿಗೆ ಹರಿಯುವವುಗಳಾಗಿವೆ. ಪೆರಿಯಾರ್ ನದಿಯು ಕೇರಳದ ಅತ್ಯಂತ ಉದ್ದವಾದ ನದಿಯಾಗಿದೆ.

ಸಮಾಜ ವಿಜ್ಞಾನ ಪ್ರಯೋಗಾಲಯದಲ್ಲಿರುವ ಭೂಪಟ ನಿರೀಕ್ಷಣೆ ಮಾಡಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯಿರಿ.

ನಿಮ್ಮ ಜಿಲ್ಲೆಯ ಮೂಲಕ ಹರಿಯುವ ನದಿಗಳು ಯಾವುವು?

ಕೇರಳದ ನದಿಗಳು ಯಾವ ಪ್ರಾಕೃತಿಕ ವಿಭಾಗದಿಂದ ಹುಟ್ಟಿಕೊಳ್ಳುತ್ತವೆ?

ನದಿಗಳಿಂದಿರುವ ಪ್ರಯೋಜನಗಳನ್ನು ಬರೆಯಿರಿ.

- ಕುಡಿಯುವ ನೀರು.
- 

ಇಷ್ಟೊಂದು ಪ್ರಯೋಜನಕಾರಿಯಾದ ನದಿಗಳ ಇಂದಿನ ಸ್ಥಿತಿ ಹೇಗಿದೆ?

ಚಿತ್ರವನ್ನು ಗಮನಿಸಿರಿ.



ಇಂದು ಕೇರಳದ ಹೆಚ್ಚಿನ ನದಿಗಳು ಮಲಿನೀಕರಣದ ಸಮಸ್ಯೆಯನ್ನು ಎದುರಿಸುತ್ತಿವೆ. ನಿಮ್ಮೂರಿನ ನದಿಗಳು ಈ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿವೆಯೇ? ನಿಮ್ಮೂರಿನ ನದಿಗಳು ಎದುರಿಸುತ್ತಿರುವ ಇತರ ಸಮಸ್ಯೆಗಳು ಯಾವುವು?

- ನದೀದಡ ಕುಸಿತ
- 



### ಮರುಹುಟ್ಟು



25 ವರ್ಷಗಳ ಹಿಂದೆ ಬತ್ತಿಬರಡಾಗಿ ಹೋಗಿದ್ದ ಕೋಡುಜರಪಳ್ಳಂ ನದಿಯು ಅದರ ಹರಿಯುವಿಕೆಯನ್ನು ಪುನರಾರಂಭಿಸಿದೆ. ಕೋಡುಜರಪಳ್ಳಂ ತಮಿಳುನಾಡಿನ ಗಡಿಯಲ್ಲಿರುವ ಪೆರುಮಾಳ್‌ಮುಡಿಯಿಂದ ಹುಟ್ಟಿ ಭವಾನಿ ನದಿಯೊಂದಿಗೆ ಸೇರುವ ಹೊಳೆಯಾಗಿದೆ. ಅರಣ್ಯನಾಶವು ನದಿಯ ನಾಶಕ್ಕೆ ಕಾರಣವಾಯಿತು. ಇಂಗುಗುಂಡಿಗಳು, ತಡೆಗೋಡೆ ನಿರ್ಮಾಣ ಅರಣ್ಯೀಕರಣ ಮೊದಲಾದ ಚಟುವಟಿಕೆಗಳ ಮೂಲಕ ನದಿಯು ನೀರಿನ ಹರಿಯುವಿಕೆಯನ್ನು ಪಡೆದು ಅಟ್ಟಪ್ಪಾಡಿ ಪ್ರದೇಶದ ಮೂಲಕ ಪುನಃ ಹರಿಯಲಾರಂಭಿಸಿದೆ.

ನಿಮ್ಮೂರಿನ ನದಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಅನ್ವೇಷಣೆ ಮಾಡಿ ಟಿಪ್ಪಣಿ ತಯಾರಿಸಿರಿ.



ಇಷ್ಟೆಲ್ಲ ನದಿಗಳಿದ್ದರೂ ಬೇಸಿಗೆ ಕಾಲದಲ್ಲಿ ಕೇರಳದ ಕೆಲವು ಪ್ರದೇಶಗಳಲ್ಲಿ ತೀವ್ರ ಜಲಕ್ಷಾಮ ಅನುಭವಕ್ಕೆ ಬರುತ್ತದೆ. ಇದಕ್ಕೆ ಕಾರಣಗಳೇನಾಗಿರಬಹುದು?

## ಹಿನ್ನೀರುಗಳು



ಹಿನ್ನೀರುಗಳು ಸಮುದ್ರದೊಂದಿಗೆ ತಾಗಿಕೊಂಡಿರುವ ದೊಡ್ಡ ಜಲಾಶಯಗಳಾಗಿವೆ. ಆಲಪ್ಪುಳ, ಕೋಟ್ಟಯಂ, ಎರ್ನಾಕುಳಂ ಜಿಲ್ಲೆಗಳಲ್ಲಿ ವ್ಯಾಪಿಸಿರುವ ವೆಂಬನಾಡು ಹಿನ್ನೀರು ಕೇರಳದ

ಅತಿದೊಡ್ಡ ಹಿನ್ನೀರಾಗಿದೆ. ಮೀನುಗಾರಿಕೆ, ಚಿಪ್ಪು ಮೀನು ಸಂಗ್ರಹ, ಹುರಿಹಗ್ಗ ತಯಾರಿ, ಪ್ರವಾಸೋದ್ಯಮಗಳಿಗಾಗಿ ಹಿನ್ನೀರುಗಳನ್ನು ಉಪಯೋಗಿಸುತ್ತಾರೆ.

## ಸರೋವರಗಳು

ಸರೋವರಗಳು ನೆಲಭಾಗದಿಂದ ಸುತ್ತುವರಿಯಲ್ಪಟ್ಟ ಜಲಾಶಯಗಳಾಗಿವೆ. ಕೊಲ್ಲಂ ಜಿಲ್ಲೆಯ ಶಾಸ್ತಾಂಕೋಟ ಸರೋವರವು ಕೇರಳದ ಅತಿ ದೊಡ್ಡ ಸಿಹಿನೀರಿನ ಸರೋವರವಾಗಿದೆ.

ಹಿನ್ನೀರುಗಳು ಹಾಗೂ ಸರೋವರಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಅವುಗಳು ಯಾವುವು?

- ಕೈಗಾರಿಕಾ ಮಾಲಿನ್ಯಗಳ ನಿಕ್ಷೇಪ
- 

ಕೇರಳೀಯರ ಜನಜೀವನದ ಮೇಲೆ ನದಿಗಳು, ಹಿನ್ನೀರುಗಳು ಮತ್ತು ಸರೋವರಗಳು ಹೆಚ್ಚಿನ ಪ್ರಭಾವವನ್ನು ಬೀರಿವೆ. ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪ್ರಾಧಾನ್ಯವಿರುವ ಅನೇಕ ಸ್ಥಳಗಳು ನದೀತೀರಗಳಲ್ಲಿವೆ. ನಮ್ಮ ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿರುವ ಜಲಾಶಯಗಳನ್ನು ಸಂರಕ್ಷಿಸಬೇಕಲ್ಲವೇ?

## ಕೃಷಿ ಹಾಗೂ ಜನಜೀವನ

ಕೇರಳವು ಕೃಷಿ ಪ್ರಧಾನ ರಾಜ್ಯವಾಗಿದೆ. ಫಲವತ್ತಾದ ಮಣ್ಣು ಹಾಗೂ ಧಾರಾಳ ಮಳೆ ಕೇರಳದ ಕೃಷಿಗೆ ಅನುಕೂಲಕರವಾದ ಸನ್ನಿವೇಶಗಳನ್ನು ಸೃಷ್ಟಿಸುತ್ತವೆ.



ಕರಾವಳಿ ಪ್ರದೇಶಗಳಲ್ಲಿ ತೆಂಗು, ಭತ್ತ ಮೊದಲಾದವುಗಳನ್ನು ಪ್ರಧಾನವಾಗಿ ಬೆಳೆಸುತ್ತಾರೆ. ಇಲ್ಲಿರುವ ಹಿನ್ನೀರುಗಳಲ್ಲಿ ಧಾರಾಳವಾಗಿ ಮೀನುಗಳನ್ನು ಸಾಕುತ್ತಾರೆ.

ಆದರೆ ನಡುನಾಡಿನಲ್ಲಿ ವೈವಿಧ್ಯಮಯವಾದ ಬೆಳೆಗಳನ್ನು ಕಾಣಬಹುದು. ಭತ್ತ, ತೆಂಗು,ಬಾಳೆ,ಸುವರ್ಣಗೆಡ್ಡೆ, ಕೆಸುವು, ಇವುಗಳಲ್ಲದೆ ಕಂಗು, ರಬ್ಬರ್, ಮರಗೆಣಸು, ಕಾಫಿ, ಕರಿಮೆಣಸು ಇತ್ಯಾದಿ ಬೆಳೆಗಳೂ ಈ ವಲಯಲ್ಲಿದೆ.

ಪರ್ವತ ಪ್ರದೇಶಗಳಲ್ಲಿನ ತಂಪಾದ ಹವಾಮಾನವು ಚಾ, ಏಲಕ್ಕಿ, ಕರಿಮೆಣಸು ಇತ್ಯಾದಿ ಬೆಳೆಗಳಿಗೆ ಹೆಚ್ಚು ಸೂಕ್ತವಾಗಿದೆ.

ಕೇರಳದ ನಾಡಹಬ್ಬವಾದ ಓಣಂ ಸಿಂಹಮಾಸದ ಬೆಳೆಗಳ ಕೊಯ್ಲಿಗೆ ಸಂಬಂಧಿಸಿದೆ ಎಂದು ನಿಮಗೆ ತಿಳಿದಿದೆಯಲ್ಲವೇ? ವಿಷು ಹಬ್ಬದಂದು ಕೃಷಿ ಉತ್ಪನ್ನಗಳನ್ನಿಟ್ಟು ಕಣಿನೋಡುವುದು ಹಾಗೂ ಪತ್ತನಾಜೆಯಂದು ಬೀಜ ಬಿತ್ತುವುದು ಇತ್ಯಾದಿಗಳು ಕೇರಳದ ಸಂಸ್ಕೃತಿಯಲ್ಲಿ ಕೃಷಿಯ ಪ್ರಾಧಾನ್ಯವನ್ನು ತಿಳಿಸುತ್ತವೆ.

ನಮ್ಮ ಕೃಷಿ ಸಂಸ್ಕೃತಿಯನ್ನೂ ಬೆಳೆಗಳ ವೈವಿಧ್ಯವನ್ನೂ ಕಾಪಾಡಿಕೊಂಡು ಬಂದರೆ ಮಾತ್ರವಲ್ಲವೇ ಇಂತಹ ಆಚರಣೆಗಳು ಅರ್ಥಪೂರ್ಣವಾಗುವುದು?

ಕೃಷಿಗೆ ಸಂಬಂಧಿಸಿದ ಗಾದೆ ಮಾತುಗಳನ್ನು ಸಂಗ್ರಹಿಸಿರಿ.



## ಕಣ್ಮರೆಯಾಗುತ್ತಿರುವ ಬೆಳೆ ವೈವಿಧ್ಯಗಳು

ಮಲೆಯಾಳಿಗಳು ಈಗ ಪರಂಪರಾಗತ ಬೆಳೆಗಳಿಗೆ ಬದಲಾಗಿ ಕೈಗಾರಿಕಾ ಪ್ರಾಧಾನ್ಯವಿರುವ ರಬ್ಬರಿನಂತಹ ಬೆಳೆಗಳನ್ನು ಕೃಷಿಮಾಡುತ್ತಾರೆ.

ಉನ್ನತ ಶಿಕ್ಷಣ ಪಡೆಯುವುದರ ಮೂಲಕ ಅರ್ಹತೆಗೆ ತಕ್ಕ ಉದ್ಯೋಗವನ್ನು ಅರಸಿಕೊಂಡು ಹೋಗುವವರ ಸಂಖ್ಯೆ ಹೆಚ್ಚುತ್ತಿದೆ. ಈ ಪ್ರವೃತ್ತಿಯು ಯುವಕರಲ್ಲಿ ಕೃಷಿಯ ಬಗ್ಗೆ ಇರುವ ಆಸಕ್ತಿಯಲ್ಲಿ ಗಮನಾರ್ಹವಾದ ಬದಲಾವಣೆಯನ್ನು ಉಂಟುಮಾಡಿದೆ. ಅಲ್ಲದೆ ಪರಂಪರಾಗತ ಕೃಷಿಯಲ್ಲಿನ ನಿರಾಸಕ್ತಿಯು ಪ್ರಸ್ತುತ ಕೇರಳದ ಪ್ರಧಾನ ಸಮಸ್ಯೆಗಳಲ್ಲೊಂದಾಗಿದೆ. ಇದಕ್ಕೊಂದು ಪರಿಹಾರ ಕಂಡುಕೊಳ್ಳುವುದು ಅಗತ್ಯವಲ್ಲವೇ? ಚರ್ಚಿಸಿರಿ.



ನಿಮ್ಮ ಮನೆಯಲ್ಲಿ ಆಹಾರ ತಯಾರಿಸಲು ಉಪಯೋಗಿಸುವ ಕೃಷಿ ಉತ್ಪನ್ನಗಳು ಯಾವುವು? ಅವುಗಳಲ್ಲಿ ನಿಮ್ಮ ಪ್ರದೇಶದಲ್ಲಿ ಕೃಷಿ ಮಾಡಿದ ಬೆಳೆಗಳು ಮತ್ತು ಇತರ ಪ್ರದೇಶಗಳಿಂದ ತರುವವುಗಳು ಎಂದು ವರ್ಗೀಕರಿಸಿ ಪಟ್ಟಿ ಮಾಡಿರಿ.

## ನನ್ನ ಕೃಷಿ ತೋಟ

ನಿಮ್ಮ ಮನೆ ಹಾಗೂ ಶಾಲಾ ಪರಿಸರದಲ್ಲಿ ಕೃಷಿ ಮಾಡಿರಿ.

ಮನೆಗೆ ಅಗತ್ಯವಿರುವ ತರಕಾರಿಗಳು, ಭತ್ತ ಇತ್ಯಾದಿಗಳನ್ನು ಕೃಷಿ ಮಾಡಿ ಉತ್ಪಾದಿಸುವುದು ಸಂತೋಷದಾಯಕವಾದ ಅನುಭವವಾಗಿದೆ. ಇದರಿಂದ ಉಂಟಾಗುವ ಪ್ರಯೋಜನಗಳು ಯಾವುವು?

- ವಿಷ ರಹಿತ ತರಕಾರಿಗಳು
- 


## ಸಾರಿಗೆ

ಕೇರಳದಲ್ಲಿ ಪ್ರತಿಯೊಂದು ಪ್ರಾಕೃತಿಕ ವಿಭಾಗಕ್ಕೂ ಸೂಕ್ತವಾದ ಸಾರಿಗೆ ವ್ಯವಸ್ಥೆಗಳು ರೂಪುಗೊಂಡಿವೆ. ಜಲಸಾರಿಗೆಯು ಹಿನ್ನೀರುಗಳು, ಸರೋವರಗಳು ಹಾಗೂ ನದೀಮುಖಜ ಭೂಮಿಗಳನ್ನೊಳಗೊಂಡ ಕರಾವಳಿ ಪ್ರದೇಶದಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿದೆ. ತಿರುವನಂತಪುರದಿಂದ ಹೊಸದುರ್ಗದವರೆಗೆ ವ್ಯಾಪಿಸಿರುವ ನೀಳವಾದ ಜಲಮಾರ್ಗ ನಮಗಿದೆ. ಮೀನುಗಾರಿಕೆ, ಸಾರಿಗೆ, ದೇಶ ರಕ್ಷಣೆ ಮುಂತಾದ ಅಗತ್ಯಗಳಿಗಾಗಿ ಬಂದರುಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

ಹಿನ್ನೀರುಗಳಿಗೆ ಸಣ್ಣ ಸೇತುವೆಗಳನ್ನು ನಿರ್ಮಿಸಿ ಕೇರಳದ ಕರಾವಳಿ ಪ್ರದೇಶಗಳಲ್ಲಿ ರೈಲ್ವೇ ಮಾರ್ಗಗಳನ್ನೂ ರಾಷ್ಟ್ರೀಯ ಹೆದ್ದಾರಿಗಳನ್ನೂ ಅಭಿವೃದ್ಧಿಪಡಿಸಲಾಯಿತು. ನಡುನಾಡು ಹಾಗೂ ಮಲೆನಾಡುಗಳಲ್ಲಿ ರಸ್ತೆ ಸಾರಿಗೆ ಹೆಚ್ಚು ಬೆಳವಣಿಗೆ ಹೊಂದಿದೆ.



ಪಶ್ಚಿಮ ಘಟ್ಟದ ಕಣಿವೆಗಳ ಮೂಲಕ ತಮಿಳುನಾಡು ಹಾಗೂ ಕರ್ನಾಟಕದ ತನಕ ಈ ಮಾರ್ಗಗಳು ಮುಂದುವರಿಯುತ್ತವೆ. ತಿರುವನಂತಪುರ, ಕೊಚ್ಚಿ, ಕಲ್ಲಿಕೋಟೆ ಎಂಬೀ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಿಂದ ಭಾರತದ ವಿವಿಧ ಭಾಗಗಳಿಗೂ ಅನೇಕ ರಾಷ್ಟ್ರಗಳಿಗೂ ವಿಮಾನ ಸೇವೆ ಇದೆ. ಭೂಪಟ 10.3ನ್ನು ವೀಕ್ಷಿಸಿರಿ.




ಚಿತ್ರ 10.3

- ಕೇರಳದಲ್ಲಿ ರೈಲ್ವೇ ಮಾರ್ಗಗಳಿಲ್ಲದ ಜಿಲ್ಲೆಗಳು ಯಾವುವು? ಯಾಕೆ?
- ರಾಷ್ಟ್ರೀಯ ಹೆದ್ದಾರಿಗಳು ಹೆಚ್ಚಾಗಿ ಹಾದುಹೋಗುವ ಪ್ರಾಕೃತಿಕ ವಿಭಾಗ ಯಾವುದು? ಯಾಕೆ?

## ದೇವರ ಸ್ವಂತ ನಾಡು

ಸದಾ ಹಸಿರಿನಿಂದ ಕೂಡಿದ, ಬೆಟ್ಟಗುಡ್ಡಗಳುಳ್ಳ ಭೂಪ್ರಕೃತಿ, ಧಾರಾಳ ಲಭಿಸುವ ಮಳೆ, ಅನೇಕ ನದಿಗಳು, ಆಹ್ಲಾದಕರವಾದ ಹವಾಮಾನ, ಉನ್ನತ ಸಾಕ್ಷರತೆ ಹಾಗೂ ಸಂಸ್ಕೃತಿ ಇರುವ ಜನರು ಇಷ್ಟೆಲ್ಲ ಸಂಪದ್ಭರಿತವಾದ ನಮ್ಮ ಕೇರಳದ ವೈವಿಧ್ಯಗಳನ್ನೂ ಸಂಪನ್ಮೂಲಗಳನ್ನೂ ಮುಂದಿನ ತಲೆಮಾರಿಗೆ ಸಂರಕ್ಷಿಸಬೇಕಾದುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಅದಕ್ಕೆ ಬೇಕಾದ ಚಟುವಟಿಕೆಗಳಲ್ಲಿ ನಾವು ಭಾಗಿಗಳಾಗೋಣ.

## ಕ್ರೋಡೀಕರಣ

- ಕೇರಳವು ಭಾರತದ ದಕ್ಷಿಣ ಭಾಗದಲ್ಲಿ ಅರಬೀ ಸಮುದ್ರದ ತೀರದಲ್ಲಿರುವ ಚಿಕ್ಕ ರಾಜ್ಯವಾಗಿದೆ.
- ಕೇರಳದಲ್ಲಿ ಮಲೆನಾಡು, ನಡುನಾಡು, ಕರಾವಳಿ ಪ್ರದೇಶ ಎಂಬೀ ಪ್ರಾಕೃತಿಕ ವಿಭಾಗಗಳಿವೆ.
- ಕೇರಳದಲ್ಲಿ ಎಡೆಬಿಟ್ಟು ಅನುಭವಕ್ಕೆ ಬರುವ ಮಳೆಗಾಲವೂ ಬೇಸಗೆ ಕಾಲವೂ ವಿವಿಧ ಕೃಷಿ ಬೆಳೆಗಳಿಗೆ ಅನುಕೂಲಕರವಾದ ವಾತಾವರಣವನ್ನು ಸೃಷ್ಟಿಸುತ್ತವೆ.
- ಕೃಷಿಯಾಧಾರಿತವಾದ ಸಂಸ್ಕೃತಿಯು ಕೇರಳದಲ್ಲಿದೆ.

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಕೇರಳದ ಸ್ಥಾನ, ಮೇರೆಗಳು, ಜಿಲ್ಲೆಗಳು ಇತ್ಯಾದಿಗಳನ್ನು ತಿಳಿದುಕೊಳ್ಳುವುದು.
- ಕೇರಳದ ವೈವಿಧ್ಯಪೂರ್ಣವಾದ ಪ್ರಾಕೃತಿಕ ವಿಭಾಗಗಳನ್ನು ವಿಶದೀಕರಿಸುವುದು.
- ಪಶ್ಚಿಮಘಟ್ಟದ ಪ್ರಾಧಾನ್ಯವನ್ನು ವಿಶ್ಲೇಷಿವುದು.
- ಪಶ್ಚಿಮಘಟ್ಟದ ಸಸ್ಯ, ಜೀವಜಾಲಗಳ ಆಲ್ಬಂ ತಯಾರಿಸುವುದು.
- ಕೇರಳದ ಕಾಲಗಳ ಕುರಿತು ನಿಗಮಗಳನ್ನು ರೂಪಿಸುವುದು.
- ತನ್ನ ಜಿಲ್ಲೆಯ ಮೂಲಕ ಹರಿಯುವ ನದಿಗಳ ಉಗಮಸ್ಥಾನ ಹಾಗೂ ಹರಿವಿನ ಗತಿಯನ್ನು ಚಿತ್ರಿಸುವುದು.
- ನದಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ವಿಶ್ಲೇಷಿಸುವುದು.

- ನದಿಗಳು ಮತ್ತು ಹಿನ್ನೀರುಗಳನ್ನು ಸಂರಕ್ಷಿಸಬೇಕಾದುದರ ಔಚಿತ್ಯವನ್ನು ವಿವಿಧ ವಿಧಾನಗಳ ಮೂಲಕ ಪ್ರಕಟಿಸುವುದು.
- ಕೇರಳದ ಸಂಸ್ಕೃತಿಯು ಕೃಷಿಯ ಆಧಾರದಲ್ಲಿ ರೂಪುಗೊಂಡಿದೆ ಎಂಬ ನಿಗಮನಕ್ಕೆ ಬರುವುದು.
- ಪ್ರಾಕೃತಿಕ ವಿಶೇಷತೆಗಳಿಗನುಸಾರವಾಗಿ ಕೇರಳದಲ್ಲಿ ಅಭಿವೃದ್ಧಿಗೊಂಡ ವಿವಿಧ ಸಾರಿಗೆ ಮಾಧ್ಯಮಗಳನ್ನು ವಿಶ್ಲೇಷಿಸುವುದು.



## ಮೌಲ್ಯನಿರ್ಣಯ ಮಾಡುವ

1. ಕೇರಳದಲ್ಲಿ ಭೂಪ್ರಕೃತಿಗೆ ಅನುಗುಣವಾದ ಕೃಷಿ ಬೆಳೆಗಳಿವೆ. ಈ ಹೇಳಿಕೆಯನ್ನು ಸಮರ್ಥಿಸುವ ಉದಾಹರಣೆಗಳನ್ನು ಕಂಡುಹಿಡಿದು ಬರೆಯಿರಿ.
2 . ಕೇರಳದ ನದಿಗಳು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ನಿಮ್ಮ ಪ್ರದೇಶದಲ್ಲಿರುವ ನದಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಟಿಪ್ಪಣಿ ತಯಾರಿಸಿರಿ.
3 . ಕೇರಳದ ಹವಾಮಾನದ ವಿಶೇಷತೆಗಳು ಯಾವುವು?
4 . ಕೇರಳದ ಪೂರ್ವಭಾಗದಲ್ಲಿ ರೈಲ್ವೇ ಮಾರ್ಗ ಇಲ್ಲದಿರಲು ಕಾರಣವೇನು?



## ಮುಂದುವರಿದ ಚಟುವಟುಕೆಗಳು

ಕಾರ್ಡ್‌ಬೋರ್ಡು ಹಾಗೂ ಆವೆಮಣ್ಣನ್ನು ಉಪಯೋಗಿಸಿ ಕೇರಳದ ಭೂಪ್ರಕೃತಿಯ ಮಾದರಿಯನ್ನು ನಿರ್ಮಿಸಿರಿ.

### ಅಗತ್ಯವಿರುವ ವಸ್ತುಗಳು

30 ಸೆ.ಮೀ. **x** 30 ಸೆ.ಮೀ ಅಳತೆಯ ಕಾರ್ಡುಬೋರ್ಡು

ಆವೆಮಣ್ಣು

ಪೆನ್ಸಿಲ್

ವಾಟರ್‌ಕಲರ್

ಮಾರ್ಕರ್ ಪೆನ್

30 ಸೆ.ಮೀ. ಉದ್ದವೂ 30 ಸೆ.ಮೀ. ಅಗಲವೂ ಇರುವ ಕಾರ್ಡುಬೋರ್ಡನ್ನು ತೆಗೆದು ಅದರಲ್ಲಿ ಕೇರಳದ ರೂಪುರೇಖೆಯನ್ನು ರಚಿಸಿರಿ. ಆವೆಮಣ್ಣನ್ನು ಹದಗೊಳಿಸಿ ಈ ರೂಪುರೇಖೆಯ ಮೇಲೆ ಕೇರಳದ ಮಾದರಿಯನ್ನು ನಿರ್ಮಿಸಿರಿ. ಪ್ರಾಕೃತಿಕ ವಿಭಾಗಗಳನ್ನು ಗುರುತಿಸಿ ಬಣ್ಣ ಹಚ್ಚಿರಿ. ಮಲೆನಾಡು, ನಡುನಾಡು, ಕರಾವಳಿ ಪ್ರದೇಶ ಎಂಬೀ ಹೆಸರುಗಳನ್ನು ಮಾರ್ಕರ್ ಪೆನ್ನಿನ ಸಹಾಯದಿಂದ ಚಿಕ್ಕ ಕಾಗದದ ತುಂಡುಗಳಲ್ಲಿ ಬರೆದು ಆಯಾ ಪ್ರಾಕೃತಿಕ ವಿಭಾಗಗಳ ಮೇಲೆ ಅಂಟಿಸಿರಿ.



11

# ನಮ್ಮ ಭಾರತ



ಶಾಲಾ ಅಸೆಂಬ್ಲಿಯಲ್ಲಿ ನೀವು ಮಾಡುವ ಪ್ರತಿಜ್ಞೆಯನ್ನು ಒಮ್ಮೆ ನೆನಪಿಸಿಕೊಳ್ಳಿರಿ. ಆ ಪ್ರತಿಜ್ಞೆ ಪ್ರಾರಂಭವಾಗುವುದು ಈ ಹೀಗಲ್ಲವೇ?

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ ಸಹೋದರಿಯರು. ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ........

ಭಾರತೀಯರಾದ ನಾವು ಭಾರತದ ವೈವಿಧ್ಯಪೂರ್ಣವಾದ ಪರಂಪರೆಗೆ ಹೆಮ್ಮೆ ಪಡುವವರಾಗಿದ್ದೇವೆ. ವೇಷ, ಭಾಷೆ, ಆಚಾರ ಮುಂತಾದವುಗಳು ಉಂಟುಮಾಡುವ ವೈವಿಧ್ಯಗಳು ಭಾರತವನ್ನು ಒಂದು ವ್ಯತ್ಯಸ್ತವಾದ ದೇಶವನ್ನಾಗಿಸುತ್ತದೆ.



ಭೂಪ್ರಕೃತಿ, ಹವಾಮಾನ, ಸಸ್ಯಜಾಲಗಳು, ಜನಜೀವನ ಇತ್ಯಾದಿಗಳಲ್ಲೆಲ್ಲ ಈ ವೈವಿಧ್ಯಗಳನ್ನು ನಮಗೆ ಕಾಣಲು ಸಾಧ್ಯ. ಇಷ್ಟೊಂದು ವೈವಿಧ್ಯಗಳಿದ್ದರೂ ಜಾತಿ-ಮತ-ಭಾಷೆ ಎಂಬ ಭೇದವಿಲ್ಲದೆ ಭಾರತೀಯರು ಒಂದೇ ತಾಯಿಯ ಮಕ್ಕಳಂತೆ ಒಗ್ಗಟ್ಟಿನಿಂದ ಜೀವಿಸುವವರಾಗಿದ್ದಾರೆ. ಭಾರತದ ವೈವಿಧ್ಯಗಳ ಕುರಿತು ಹೆಚ್ಚಿನ ಮಾಹಿತಿಗಳನ್ನು ತಿಳಿಯಬೇಕಲ್ಲವೇ? ಇದಕ್ಕೆ ಈ ಅಧ್ಯಾಯವು ಸಹಾಯಕವಾಗಿದೆ.

## ಭಾರತ - ಸ್ಥಾನ ಹಾಗೂ ನೆರೆಯ ದೇಶಗಳು

ಹಿಂದಿನ ಅಧ್ಯಾಯದಲ್ಲಿ ಭೂಖಂಡಗಳ ಕುರಿತು ನಾವು ಚರ್ಚಿಸಿದೆವಲ್ಲವೇ. ಭಾರತವು ಯಾವ ಭೂಖಂಡದಲ್ಲಿದೆಯೆಂದು ಹೇಳಲು ಸಾಧ್ಯವೇ?

ಏಷ್ಯಾದ ಭೂಪಟದಿಂದ ಭಾರತದ ನೆರೆಯ ದೇಶಗಳು ಯಾವುವೆಂದು ಕಂಡುಹಿಡಿಯಿರಿ. ಇದಕ್ಕಾಗಿ ಅಟ್ಲಾಸ್ ಅಥವಾ ಭೂಪಟಗಳನ್ನು ಉಪಯೋಗಿಸಿಕೊಳ್ಳಬಹುದು.


ಭೂಪಟದಲ್ಲಿ (ಚಿತ್ರ 11.1) ಭಾರತದ ದಕ್ಷಿಣ ಭಾಗವು ಸಮುದ್ರದಿಂದ ಸುತ್ತುವರಿದಿರುವುದನ್ನು ಕಾಣಬಹುದಲ್ಲವೇ? ಇದು ಹಿಂದೂ ಮಹಾಸಾಗರ. ಭಾರತದ ಪೂರ್ವದಲ್ಲಿರುವ ಸಮುದ್ರವನ್ನು ಬಂಗಾಳ ಕೊಲ್ಲಿಯೆಂದೂ ಪಶ್ಚಿಮದಲ್ಲಿರುವ ಸಮುದ್ರವನ್ನು ಅರಬೀ ಸಮುದ್ರವೆಂದೂ ಕರೆಯಲಾಗುತ್ತದೆ.

## ಭಾರತ - ರಾಜ್ಯಗಳು

ಆಡಳಿತ ಸೌಲಭ್ಯಕ್ಕಾಗಿ ಭಾರತವನ್ನು 28 ರಾಜ್ಯಗಳಾಗಿ ವಿಭಾಗಿಸಲಾಗಿದೆ. ಪ್ರತಿಯೊಂದು ರಾಜ್ಯದ ಆಡಳಿತ ಕೇಂದ್ರಗಳನ್ನು ಆ ರಾಜ್ಯದ ರಾಜಧಾನಿ ಎಂದು ಗುರುತಿಸಲಾಗುತ್ತದೆ.

ಭಾರತದ ಭೂಪಟ (ಚಿತ್ರ 11.1)ದ ಸಹಾಯದಿಂದ 28 ರಾಜ್ಯಗಳನ್ನೂ ಅವುಗಳ ರಾಜಧಾನಿಗಳನ್ನೂ ಕಂಡುಹಿಡಿಯಿರಿ.

ನವದೆಹಲಿಯು ದೇಶದ ಒಟ್ಟು ಆಡಳಿತವನ್ನು ನಿರ್ವಹಿಸುವ ರಾಷ್ಟ್ರೀಯ ರಾಜಧಾನಿಯಾಗಿದೆ.


ಭಾರತ
ರಾಜಕೀಯ ಭೂಪಟ
N
250 0 250
ಶ್ರೀನಗರ
ಜಮ್ಮು ಕಾಶ್ಮೀರ
ಹಿಮಾಚಲ ಪ್ರದೇಶ
ಸಿಮ್ಲಾ
ಪಂಜಾಬ್
ಚಂಡೀಗಢ
ಡೆಹ್ರಾಡೂನ್
ಉತ್ತರಾಖಂಡ
ಹರ್ಯಾಣ
ದೆಹಲಿ
ನವ ದೆಹಲಿ
ರಾಜಸ್ಥಾನ
ಜೈಪುರ
ಲಕ್ನೋ
ಉತ್ತರಪ್ರದೇಶ
ಸಿಕ್ಕಿಂ
ಗ್ಯಾಂಗ್ಟೋಕ್
ಪಾಟ್ನಾ
ಬಿಹಾರ
ಅರುಣಾಚಲ ಪ್ರದೇಶ
ಅಸ್ಸಾಂ
ನಾಗಾಲ್ಯಾಂಡ್
ಕೊಹಿಮಾ
ಮೇಘಾಲಯ
ಇಂಫಾಲ್
ಮಣಿಪುರ
ಅಗರ್ತಲ
ತ್ರಿಪುರ
ಐಜ್ವಾಲ್
ಮಿಝೋರಾಂ
ಗುಜರಾತ್
ಗಾಂಧಿನಗರ
ಭೋಪಾಲ
ಮಧ್ಯಪ್ರದೇಶ
ಜಾರ್ಖಂಡ್
ರಾಂಚಿ
ಕೋಲ್ಕತ್ತ
ಪಶ್ಚಿಮ ಬಂಗಾಳ
ಛತ್ತೀಸ್‌ಗಡ್
ರಾಯ್‌ಪುರ
ಒಡಿಶಾ
ಭುವನೇಶ್ವರ
ಮಹಾರಾಷ್ಟ್ರ
ಮುಂಬೈ
ಆಂಧ್ರಪ್ರದೇಶ
ಹೈದರಾಬಾದ್
ಅರಬ್ಬಿಸಮುದ್ರ
ಪಣಜಿ
ಗೋವಾ
ಕರ್ನಾಟಕ
ಬಂಗಾಳಕೊಲ್ಲಿ
ಬೆಂಗಳೂರು
ಚೆನ್ನೈ
ಕೇರಳ
ತಮಿಳುನಾಡು
ತಿರುವನಂತಪುರ
ಅಂಡಮಾನ್ ನಿಕೋಬಾರ್ ದ್ವೀಪ ಸಮೂಹ
ಅಂತರಾಷ್ಟ್ರೀಯ ಗಡಿ
ರಾಜ್ಯದ ಗಡಿ
ರಾಜ್ಯ ರಾಜಧಾನಿ
ರಾಷ್ಟ್ರೀಯ ರಾಜಧಾನಿ
ಹಿಂದೂ ಮಹಾಸಾಗರ

ಚಿತ್ರ 11.1

ಈ ರಾಜ್ಯಗಳ ಹೊರತು ಪೋಂಡಿಚ್ಚೇರಿ, ದಾಮನ್-ದಿಯು,ದಾದ್ರ ನಗರ್ ಹವೇಲಿ, ಚಂಡೀಗಢ, ಲಕ್ಷದ್ವೀಪ, ಅಂಡಮಾನ್ ನಿಕೋಬಾರ್ ದ್ವೀಪ ಸಮೂಹ- ಹೀಗೆ 6 ಕೇಂದ್ರಾಡಳಿತ ಪ್ರದೇಶಗಳೂ ಭಾರತದಲ್ಲಿವೆ.

ಭೂಪಟ(ಚಿತ್ರ 11.1)ದ ಸಹಾಯದಿಂದ ಕೇಂದ್ರಾಡಳಿತ ಪ್ರದೇಶಗಳ ಹಾಗೂ ರಾಷ್ಟ್ರೀಯ ರಾಜಧಾನಿಯ ಸ್ಥಾನವನ್ನು ಕಂಡುಹಿಡಿಯಿರಿ.

## ಭಾರತ- ಪ್ರಾಕೃತಿಕ ವಿಭಾಗಗಳು

ಭೂಮಿಯಲ್ಲಿ ಪರ್ವತಗಳು, ಪೀಠಭೂಮಿಗಳು ಬಯಲುಗಳು, ದ್ವೀಪಗಳು ಇತ್ಯಾದಿ ವಿವಿಧ ಭೂಸ್ವರೂಪಗಳಿವೆ. ಈ ರೀತಿಯಲ್ಲಿ ಒಂದು ಭೂಪ್ರದೇಶದಲ್ಲಿ ಕಂಡುಬರುವ ವಿಶೇಷತೆಗಳನ್ನು ಅಲ್ಲಿನ ಪ್ರಾಕೃತಿಕ ವಿಭಾಗಗಳು ಎನ್ನುವರು.

ಚಿಕ್ಕದಾದ ಹಾಗೂ ದೊಡ್ಡದಾದ ಪರ್ವತ ಸಾಲುಗಳು, ಬಯಲುಗಳು, ವಿಶಾಲವಾದ ಪೀಠಭೂಮಿಗಳು, ಮರುಭೂಮಿಗಳು, ಕರಾವಳಿ ಪ್ರದೇಶಗಳು ಮತ್ತು ದ್ವೀಪಗಳನ್ನು ಒಳಗೊಂಡ ವೈವಿಧ್ಯಮಯವಾದ ಭೂ ಪ್ರಕೃತಿಯು ಭಾರತದಲ್ಲಿದೆ.

## ಭಾರತದ ಪರ್ವತಗಳು

ವಿವಿಧ ಭೂಖಂಡಗಳಲ್ಲಿರುವ ಪ್ರಧಾನ ಪರ್ವತ ಸಾಲುಗಳ ಕುರಿತು ಹಿಂದಿನ ಅಧ್ಯಾಯದಲ್ಲಿ ನೀವು ತಿಳಿದುಕೊಂಡಿರುವಿರಲ್ಲವೇ.



ಹಿಮಾಲಯ ಪರ್ವತ



ಪಶ್ಚಿಮಘಟ್ಟದ ಪರ್ವತಶ್ರೇಣಿಗಳು

ಪ್ರಪಂಚದ ಅತಿ ಎತ್ತರದ ಪರ್ವತ ಶ್ರೇಣಿಯಾದ ಹಿಮಾಲಯದ ಒಂದು ಭಾಗವು ಭಾರತದಲ್ಲಿದೆ. ಹಿಮಾಲಯಕ್ಕಿಂತಲೂ ಎತ್ತರ ಕಡಿಮೆಯಿರುವ ಪರ್ವತ ಸಾಲುಗಳಾದ ಅರಾವಳಿ, ಪಶ್ಚಿಮಘಟ್ಟ (ಸಹ್ಯಾದ್ರಿ), ಪೂರ್ವಘಟ್ಟ, ವಿಂಧ್ಯಾ, ಸಾತ್ಪುರ ಶ್ರೇಣಿಗಳು ಭಾರತದ ಇತರ ಪ್ರಧಾನ ಪರ್ವತ ಶ್ರೇಣಿಗಳಾಗಿವೆ. ಈ ಎಲ್ಲ ಪರ್ವತ ಶ್ರೇಣಿಗಳಿಂದ ಅನೇಕ ನದಿಗಳು ಉದ್ಭವಿಸುತ್ತವೆ.

## ಭಾರತದ ಬಯಲುಗಳು


ಬಯಲುಗಳು ಅತಿ ವಿಶಾಲವಾದ ಹಾಗೂ ಸಮತಟ್ಟಾದ ಭೂಪ್ರದೇಶಗಳಾಗಿವೆ. ಹಿಮಾಲಯ ಪರ್ವತ ಸಾಲುಗಳ ದಕ್ಷಿಣ ಭಾಗದಲ್ಲಿ ವಿಶಾಲವಾದ ಒಂದು ಬಯಲು ಇದೆ. ಹಿಮಾಲಯದಿಂದ ನದಿಗಳು ಹರಿಯುವಾಗ ಹೊತ್ತು ತಂದ ಮೆಕ್ಕಲು ಮಣ್ಣು ನಿಕ್ಷೇಪಗೊಂಡು ಈ ಬಯಲುಗಳು ರೂಪುಗೊಂಡಿವೆ. ಇವುಗಳನ್ನು ಸಿಂಧೂ-ಗಂಗಾ-ಬ್ರಹ್ಮಪುತ್ರ ಬಯಲುಗಳು ಎಂಬುದಾಗಿ ಕರೆಯುತ್ತಾರೆ. ಈ ಫಲವತ್ತಾದ ಬಯಲುಗಳಲ್ಲಿ ಗೋಧಿ, ಭತ್ತ, ಜೋಳ, ಕಬ್ಬು ಇತ್ಯಾದಿ ಅನೇಕ ಬೆಳೆಗಳನ್ನು ಕೃಷಿ ಮಾಡುತ್ತಾರೆ. ಆದ್ದರಿಂದ ಈ ಪ್ರದೇಶವನ್ನು 'ಭಾರತದ ಆಹಾರ ಕಣಜ'ವೆಂದು ಕರೆಯುತ್ತಾರೆ.



ಗಂಗಾಬಯಲು

## ಭಾರತದ ಮರುಭೂಮಿ

ಜೋರಾಗಿ ಬೀಸುವ ಗಾಳಿ, ತೀಕ್ಷ್ಣ ಉಷ್ಣತೆ, ದೃಷ್ಟಿ ಹಾಯಿಸಿದಷ್ಟು ದೂರದವರೆಗೆ ವಿಶಾಲವಾಗಿ ವ್ಯಾಪಿಸಿರುವ ಮರಳ ದಿಣ್ಣೆಗಳು ಇತ್ಯಾದಿಗಳು ಮರುಭೂಮಿಗಳ ವಿಶೇಷತೆಗಳಾಗಿವೆ. ಭಾರತದ ವಾಯುವ್ಯ ಭಾಗದಲ್ಲಿರುವ ರಾಜಸ್ಥಾನದ ಹೆಚ್ಚಿನ ಭಾಗವೂ ಮರುಭೂಮಿಯಾಗಿದೆ. ಇದನ್ನು ಥಾರ್ ಮರುಭೂಮಿಯೆಂದು ಕರೆಯುತ್ತಾರೆ. ಈ ಪ್ರದೇಶದಲ್ಲಿ ಅತಿ ಕಡಿಮೆ ಮಳೆಬೀಳುವುದರಿಂದ ಜನವಾಸವೂ ಕೃಷಿಯೂ ಕಡಿಮೆಯಾಗಿದೆ.



ಥಾರ್ ಮರುಭೂಮಿ

## ಭಾರತದ ಪೀಠಭೂಮಿಗಳು



ದಖ್ಖಣ ಪೀಠಭೂಮಿ

ಸುತ್ತ ಮುತ್ತಲಿನ ಪ್ರದೇಶಗಳಿಗಿಂತ ಎತ್ತರವಾಗಿದ್ದು ಮೇಲ್ಭಾಗದಲ್ಲಿ ಸಮತಟ್ಟಾಗಿರುವ ಭೂಪ್ರದೇಶಗಳನ್ನು ಪೀಠಭೂಮಿಗಳು ಎಂದು ಕರೆಯುತ್ತಾರೆ. ದಖ್ಖಣದ ಪೀಠಭೂಮಿಯು ಭಾರತದ ಅತಿ ದೊಡ್ಡ ಪೀಠಭೂಮಿಯಾಗಿದೆ. ಮಾಳ್ವ, ಛೋಟಾನಾಗ್ಪುರ ಇತ್ಯಾದಿಗಳು ಇತರ ಪ್ರಧಾನ ಪೀಠಭೂಮಿಗಳಾಗಿವೆ.

## ಭಾರತದ ಕರಾವಳಿಗಳು



ಕರಾವಳಿ ಪ್ರದೇಶಗಳು

ಸಮುದ್ರಕ್ಕೆ ತಾಗಿಕೊಂಡಿರುವ ಬಯಲು ಪ್ರದೇಶವನ್ನು ಕರಾವಳಿ ಎನ್ನುತ್ತಾರೆ. ಭಾರತಕ್ಕೆ ಉದ್ದವಾದ ಕರಾವಳಿ ಪ್ರದೇಶವಿದೆ.

- ಭಾರತದ ಅತ್ಯಂತ ದಕ್ಷಿಣದಲ್ಲಿರುವ ಕರಾವಳಿ ಪ್ರಾಂತ್ಯ ಯಾವುದೆಂಬುದನ್ನು ಭೂಪಟದ (ಚಿತ್ರ - 11.1) ಸಹಾಯದಿಂದ ಕಂಡುಹಿಡಿಯಿರಿ.
- 

## ಭಾರತದ ದ್ವೀಪಗಳು

ಸುತ್ತಲೂ ಸಮುದ್ರದಿಂದ ಆವರಿಸಿರುವ ನೆಲಭಾಗವನ್ನು ದ್ವೀಪಗಳೆಂದು ಕರೆಯುತ್ತಾರೆ. ಭಾರತದ ಭಾಗವಾಗಿರುವ ಅನೇಕ ದ್ವೀಪಗಳು ಹಿಂದೂ ಮಹಾಸಾಗರದಲ್ಲಿದೆ. ಅರಬೀ ಸಮುದ್ರದಲ್ಲಿರುವ ಲಕ್ಷದ್ವೀಪ, ಬಂಗಾಳ ಕೊಲ್ಲಿಯಲ್ಲಿರುವ ಅಂಡಮಾನ್ ನಿಕೋಬಾರ್ ದ್ವೀಪಗಳು ಭಾರತದ ದ್ವೀಪ ಸಮೂಹಗಳಾಗಿವೆ. ಅವುಗಳ ಚಿತ್ರಗಳನ್ನು ಕೆಳಗೆ ನೀಡಲಾಗಿದೆ.


ಲಕ್ಷದ್ವೀಪ


ಅಂಡಮಾನ್ ನಿಕೋಬಾರ್

ಭೂಪಟದ (ಚಿತ್ರ 11.1) ಸಹಾಯದಿಂದ ಲಕ್ಷದ್ವೀಪ ಹಾಗೂ ಅಂಡಮಾನ್ ನಿಕೋಬಾರ್ ದ್ವೀಪಗಳ ಸ್ಥಾನವನ್ನು ಕಂಡುಹಿಡಿಯಿರಿ.

## ಭಾರತದ ನದಿಗಳು


ಗಂಗಾನದಿ

ಭಾರತದ ಪ್ರಧಾನ ಪರ್ವತ ಶ್ರೇಣಿಗಳ ಕುರಿತು ನಾವು ಚರ್ಚಿಸಿದೆವಲ್ಲವೇ.

ಇಲ್ಲಿರುವ ಹೆಚ್ಚಿನ ಪರ್ವತ ಶ್ರೇಣಿಗಳು ಅನೇಕ ನದಿಗಳ ಉಗಮ ಸ್ಥಾನವಾಗಿವೆ.

ಹಿಮಾಲಯ ಪರ್ವತ ಶ್ರೇಣಿಗಳಿಂದ ಉದ್ಭವಿಸುವ ಸಿಂಧೂ, ಗಂಗಾ, ಬ್ರಹ್ಮಪುತ್ರ ಹಾಗೂ ಅರ್ಧದ್ವೀಪದದ ಉನ್ನತ ಪ್ರದೇಶಗಳಿಂದ ಉದ್ಭವಿಸುವ ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ, ನರ್ಮದ, ತಪತಿ ಎಂಬಿವು ಭಾರತದ ಪ್ರಧಾನ ನದಿಗಳಾಗಿವೆ.

## ಭಾರತ - ಹವಾಮಾನ


ಮಳೆಗಾಲದಲ್ಲಿ

ಭಾರತದಲ್ಲಿ ವೈವಿಧ್ಯಗಳಿಂದ ಕೂಡಿದ ಹವಾಮಾನವು ಅನುಭವಕ್ಕೆ ಬರುತ್ತದೆ. ಭಾರತದಲ್ಲಿ ಮಳೆಗಾಲ, ಚಳಿಗಾಲ, ಬೇಸಗೆ ಕಾಲ ಇತ್ಯಾದಿ ಋತುಗಳು ಅನುಭವಕ್ಕೆ ಬರುತ್ತವೆ. ಜೂನ್‌ನಿಂದ ಸೆಪ್ಟಂಬರ್ ನವರೆಗೆ ಹಾಗೂ ಒಕ್ಟೋಬರ್‌ನಿಂದ ನವಂಬರ್‌ವರೆಗಿನ ಎರಡು ಮಳೆಗಾಲಗಳು ಭಾರತದಲ್ಲಿವೆ.



ಚಳಿಗಾಲದ ದೃಶ್ಯ

ಅರಬೀ ಸಮುದ್ರದೊಂದಿಗೆ ಸೇರಿಕೊಂಡಿರುವ ಪಶ್ಚಿಮ ತೀರ ಪ್ರದೇಶಗಳಲ್ಲೂ ಈಶಾನ್ಯ ರಾಜ್ಯಗಳಲ್ಲೂ ಈ ಕಾಲದಲ್ಲಿ ಧಾರಾಳ ಮಳೆ ಲಭಿಸುತ್ತದೆ. ಮೇಘಾಲಯದ ಚಿರಾಪುಂಜಿಯು ಭಾರತದಲ್ಲಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದೆ.ಭಾರತದ ಕೃಷಿವಲಯಗಳು ಮಳೆಗಾಲವನ್ನು ಆಶ್ರಯಿಸಿಕೊಂಡಿವೆ. ಡಿಸೆಂಬರಿನಿಂದ ಫೆಬ್ರವರಿ ತಿಂಗಳಿನವರೆಗೆ ಭಾರತದಲ್ಲಿ ಚಳಿಗಾಲವು ಅನುಭವಕ್ಕೆ ಬರುತ್ತದೆ. ಚಳಿಗಾಲದ ನಂತರ ಮಾರ್ಚ್, ಎಪ್ರಿಲ್, ಮೇ ತಿಂಗಳುಗಳಲ್ಲಿ ಭಾರತದಲ್ಲಿ ಬೇಸಿಗೆ ಕಾಲವು ಅನುಭವಕ್ಕೆ ಬರುತ್ತದೆ.


ಬೇಸಿಗೆ ಕಾಲದ ದೃಶ್ಯ

## ಭಾರತ - ನೈಸರ್ಗಿಕ ಸಸ್ಯಜಾಲಗಳು ಹಾಗೂ ಜೀವಜಾಲಗಳು

ಭಾರತದ ಭೂಪ್ರಕೃತಿ ಹಾಗೂ ಹವಾಮಾನದಲ್ಲಿ ಹೆಚ್ಚಿನ ವೈವಿಧ್ಯಗಳಿವೆ ಎಂದು ನೀವು ಕಲಿತಿರಲ್ಲವೇ? ಈ ವೈವಿಧ್ಯಗಳಿಗನುಸಾರವಾಗಿ ಸಸ್ಯಗಳಲ್ಲೂ ಜೀವಜಾಲಗಳಲ್ಲೂ ವೈವಿಧ್ಯಗಳಿವೆ. ಭಾರತದಲ್ಲಿ ಮಳೆಕಾಡುಗಳು, ಎಲೆ ಉದುರಿಸುವ ಕಾಡುಗಳು, ಮುಳ್ಳುಗಿಡಗಳು, ಕುರುಚಲು ಕಾಡುಗಳು, ಹುಲ್ಲುಗಾವಲುಗಳು ಮೊದಲಾದ ಸಸ್ಯಜಾಲಗಳಿವೆ.


ಮಳೆಕಾಡು


ಎಲೆ ಉದುರಿಸುವ ಕಾಡು

ಆನೆ, ಸಿಂಹ, ಚಿರತೆ, ಹುಲಿ, ಕಾಡುಕೋಣ, ಜಿಂಕೆ, ನವಿಲು, ಕೊಂಬುಕೊಕ್ಕಿನ ಪಕ್ಷಿಗಳಂತಹ ಅನೇಕ ಮೃಗ-ಪಕ್ಷಿಗಳ ಆವಾಸ ಕೇಂದ್ರಗಳಾದ ಈ ವನಪ್ರದೇಶಗಳು ಭಾರತದ ಅಮೂಲ್ಯವಾದ ಸಂಪತ್ತು ಎಂಬುದರಲ್ಲಿ ಸಂಶಯವಿಲ್ಲ.



ಹುಲ್ಲುಗಾವಲು



ಮುಳ್ಳುಗಿಡಗಳು

## ನಾವು ಭಾರತೀಯರು

ಭಾರತದ ಭೂಸ್ವರೂಪ, ಹವಾಮಾನ, ಸಸ್ಯಜಾಲ ಇತ್ಯಾದಿಗಳಲ್ಲಿ ವೈವಿಧ್ಯವಿದೆಯೆಂಬುದನ್ನು ತಿಳಿದುಕೊಂಡಿರುವಿರಲ್ಲವೆ. ಈ ವೈವಿಧ್ಯಕ್ಕನುಗುಣವಾಗಿ ಜನಜೀವನದಲ್ಲೂ ವೈವಿಧ್ಯವನ್ನು ಕಾಣಬಹುದು.

ದಕ್ಷಿಣ ಭಾರತದವರಿಗೆ ಅಕ್ಕಿಯು ಪ್ರಧಾನ ಆಹಾರಧಾನ್ಯವಾಗಿದ್ದರೆ ಉತ್ತರ ಭಾರತದವರಿಗೆ ಗೋಧಿಯು ಪ್ರಧಾನ ಆಹಾರಧಾನ್ಯವಾಗಿದೆ. ಆಹಾರ ಕ್ರಮದಲ್ಲಿ ಪ್ರಾದೇಶಿಕವಾದ ಈ ವ್ಯತ್ಯಾಸಗಳಿಗೆ ಕಾರಣವೇನಾಗಿರಬಹುದು? ತರಗತಿಯಲ್ಲಿ ಚರ್ಚೆ ಮಾಡಿರಿ.

ದಕ್ಷಿಣ ಭಾರತದವರು ಸಾಮಾನ್ಯವಾಗಿ ಹತ್ತಿ ಬಟ್ಟೆಗಳನ್ನು ಉಪಯೋಗಿಸಿದರೆ ಪರ್ವತ ಪ್ರದೇಶಗಳಲ್ಲಿ ವಾಸಿಸುವ ಜನರು ಉಣ್ಣೆ ಬಟ್ಟೆಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಇದಕ್ಕೆ ಕಾರಣವೇನಾಗಿರಬಹುದು?

ಆಚರಣೆಗಳಲ್ಲೂ ವೈವಿದ್ಯಗಳಿವೆ. ಓಣಂ ಕೇರಳೀಯರ ನಾಡಹಬ್ಬವಾಗಿದೆ. ಪೊಂಗಲ್ ತಮಿಳುನಾಡಿನ ಪ್ರಧಾನ ಆಚರಣೆಯಾಗಿದೆ. ಒಡಿಶಾದಲ್ಲಿ ಬಿಹು, ಉತ್ತರ ಭಾರತದಲ್ಲಿ ಹೋಳಿ.. ಹೀಗೆ ಉತ್ಸವಗಳಲ್ಲೂ ಆಚರಣೆಗಳಲ್ಲೂ ವೈವಿಧ್ಯವನ್ನು ಕಾಣಬಹುದು. ಭಾರತದ ಸಾಂಸ್ಕೃತಿಕ ವೈವಿಧ್ಯಗಳಿಗೆ ಹೆಚ್ಚಿನ ಉದಾಹರಣೆಗಳನ್ನು ಕಂಡುಹಿಡಿಯಿರಿ.

- ಭಾಷೆ
- 



ಭಾರತದ ಇತರ ಭಾಗಗಳು ನಾವು ವಾಸಿಸುವ ಪ್ರದೇಶಗಳಿಗಿಂತ ತೀರಾಭಿನ್ನವಾಗಿದೆ. ಭೂಸ್ವರೂಪ, ಹವಾಮಾನ, ಸಸ್ಯಜೀವಜಾಲ, ಜನಜೀವನ ಇವುಗಳಲ್ಲಿ ಅನೇಕ ವೈವಿಧ್ಯಗಳಿದ್ದರೂ ಅವೆಲ್ಲಕ್ಕಿಂತಲೂ ಮಿಗಿಲಾಗಿ ಭಾರತವು ಅಖಂಡ ದೇಶವಾಗಿ ಅಸ್ತಿತ್ವದಲ್ಲಿದೆ. ಹೀಗೆ ಭಾರತದ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ಖಂಡಿತವಾಗಿಯೂ ನಾವು ಹೆಮ್ಮೆಪಡಲೇಬೇಕು.



## ಕ್ರೋಢೀಕರಣ

- ಭಾರತವು ಏಷ್ಯಾ ಖಂಡದ ದಕ್ಷಿಣ ಭಾಗದಲ್ಲಿದೆ.
- ಭಾರತದಲ್ಲಿ 28 ಪ್ರಾಂತ್ಯಗಳು, 6 ಕೇಂದ್ರಾಡಳಿತ ಪ್ರದೇಶಗಳು ಹಾಗೂ ಒಂದು ರಾಷ್ಟ್ರೀಯ ರಾಜಧಾನಿ ನಗರವೂ ಇದೆ.
- ಪರ್ವತಗಳು, ಪೀಠಭೂಮಿಗಳು, ಬಯಲುಗಳು, ಕರಾವಳಿ ಪ್ರದೇಶಗಳು, ದ್ವೀಪಗಳು ಇತ್ಯಾದಿಗಳನ್ನೊಳಗೊಂಡ ಪ್ರಾಕೃತಿಕ ವಿಭಾಗಗಳು ಭಾರತಲ್ಲಿವೆ.
- ಸಿಂಧೂ, ಗಂಗಾ, ಬ್ರಹ್ಮಪುತ್ರಾ, ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ, ನರ್ಮದ, ತಪತಿ ಎಂಬಿವು ಭಾರತದ ಪ್ರಧಾನ ನದಿಗಳಾಗಿವೆ.
- ಭಾರತದಲ್ಲಿ ಋತುಗಳನ್ನು ಮಳೆಗಾಲ, ಚಳಿಗಾಲ, ಬೇಸಗೆಕಾಲ ಎಂದು ವಿಂಗಡಿಸಲಾಗಿದೆ.
- ಮಳೆಕಾಡು, ಎಲೆಉದುರಿಸುವ ಕಾಡು, ಮುಳ್ಳುಗಿಡಗಳು, ಕುರುಚಲು ಕಾಡುಗಳು, ಹುಲ್ಲುಗಾವಲುಗಳು ಭಾರತದ ಪ್ರಧಾನ ಸಸ್ಯಜಾಲಗಳಾಗಿವೆ.
- ಭೂಪ್ರಕೃತಿ, ಹವಾಮಾನ, ಸಸ್ಯಜಾಲಗಳು, ಭಾಷೆ, ವೇಷ, ಆಹಾರಕ್ರಮ, ಆಚರಣೆಗಳು ಹಾಗೂ ಉತ್ಸವಗಳಲ್ಲಿ ಅನೇಕ ವೈವಿಧ್ಯಗಳಿದ್ದರೂ ಅದಕ್ಕಿಂತಲೂ ಮಿಗಿಲಾಗಿ ಭಾರತವು ಒಂದು ಅಖಂಡ ದೇಶವಾಗಿ ಅಸ್ತಿತ್ವದಲ್ಲಿದೆ.



## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಏಷ್ಯಾ ಖಂಡದ ಭಾಗವಾದ ಭಾರತದ ವಿಸ್ತೀರ್ಣ, ಸ್ಥಾನ, ಮೇರೆಗಳು, ಪ್ರಾಂತ್ಯಗಳು, ರಾಜಧಾನಿ ಇತ್ಯಾದಿಗಳನ್ನು ತಿಳಿದುಕೊಳ್ಳುವುದು.
- ಭಾರತದ ಪ್ರಾಕೃತಿಕ ವಿಶೇಷತೆಗಳಾದ ಭೂಸ್ವರೂಪ, ನದಿಗಳು, ಹವಾಮಾನ, ಸಸ್ಯಜೀವಜಾಲಗಳು ಇತ್ಯಾದಿಗಳ ವೈವಿಧ್ಯಗಳ ಕುರಿತು ತಿಳಿದುಕೊಳ್ಳುವುದು.

- ಭಾರತದ ಸಾಂಸ್ಕೃತಿಕ ವಿಶೇಷತೆಗಳಾದ ಭಾಷೆ, ವೇಷ, ಆಚಾರಗಳು, ಆಚರಣೆಗಳು ಆಹಾರಕ್ರಮ, ಕೃಷಿ ಇತ್ಯಾದಿಗಳ ವೈವಿಧ್ಯಗಳ ಕುರಿತು ತಿಳಿದುಕೊಳ್ಳುವುದು.
- ವಿವಿಧತೆಯಲ್ಲಿ ಏಕತೆ ಎಂಬ ಆಶಯವನ್ನು ರೂಪಿಸಿಕೊಳ್ಳುವುದು.



## ಮೌಲ್ಯ ನಿರ್ಣಯ ಮಾಡುವ

1 ಕೆಳಗೆ ನೀಡಿರುವ ಪ್ರಾಂತ್ಯಗಳ ರಾಜಧಾನಿಗಳನ್ನು ಬರೆಯಿರಿ.

- ಅರುಣಾಚಲ ಪ್ರದೇಶ
- ಹಿಮಾಚಲ ಪ್ರದೇಶ
- ಮಿಝೋರಾಂ
- ರಾಜಸ್ಥಾನ
- ಛತ್ತೀಸ್‌ಘಡ್
- ಗೋವ

2 ಭಾರತದ ಪ್ರಾಕೃತಿಕ ವಿಭಾಗಗಳನ್ನು ವಿವರಿಸಿರಿ.

3 ಹಿಮಾಲಯದಿಂದ ಉದ್ಭವಿಸುವ ನದಿಗಳನ್ನು ಹಾಗೂ ಅರ್ಧದ್ವೀಪದ ಉನ್ನತ ಪ್ರದೇಶಗಳಿಂದ ಉದ್ಭವಿಸುವ ನದಿಗಳನ್ನು ಕಂಡುಹಿಡಿದು ಪಟ್ಟಿ ತಯಾರಿಸಿರಿ.

4 ಭಾರತದ ಹವಾಮಾನದ ವಿಶೇಷತೆಗಳನ್ನು ಸ್ಪಷ್ಟಪಡಿಸಿರಿ.



## ಮುಂದುವರಿದ ಚಟುವಟಿಕೆಗಳು

- ಭಾರತದ ರಾಜಕೀಯ ಭೂಪಟದ ಸಹಾಯದಿಂದ 28 ಪ್ರಾಂತ್ಯಗಳನ್ನೂ ಅವುಗಳ ರಾಜಧಾನಿಗಳನ್ನೂ ಕಂಡುಹಿಡಿದು ಪಟ್ಟಿ ಪೂರ್ತಿಗೊಳಿಸಿರಿ.

| ಕ್ರಮ ಸಂಖ್ಯೆ | ಪ್ರಾಂತ್ಯಗಳು | ರಾಜಧಾನಿ |
|---|---|---|
| 1 | ಅರುಣಾಚಲ ಪ್ರದೇಶ | ಇಟಾನಗರ |
| 2 | | |
| 3 | | |
| 4 | | |
| ● | | |
| ● | | |
| 28 | | |

- ‘ವೇಷಭೂಷಣದ ವೈವಿಧ್ಯ ಭಾರತದಲ್ಲಿ’ ಎಂಬ ಹೆಸರಿನಲ್ಲಿ ಒಂದು ಡಿಜಿಟಲ್ ಆಲ್ಬಂ ತಯಾರಿಸಿರಿ.
- ಅಟ್ಲಾಸಿನ ಅಥವಾ ಭೂಪಟ (ಭಾರತ- ಪ್ರಾಕೃತಿಕ ಭೂಪಟ)ದ ಸಹಾಯದಿಂದ ಭಾರತದ ಪರ್ವತ, ಬಯಲು ಹಾಗೂ ಪೀಠಭೂಮಿಗಳ ಸ್ಥಾನವನ್ನು ಕಂಡುಹಿಡಿಯಿರಿ.